ಸಂಪುಟ : 8 ಸಂಚಿಕೆ : 231 ಪುಟ : 4 ಬೆಲೆ : 3.00 ಗುರುವಾರ ಅಕ್ಟೋಬರ್ 19, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 231 Pages : 4 Price : 3.00 Thursday October 19, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 19 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 27 ಕಾಶಿ ವಿಶ್ವನಾಥನಗರ, ಮಾರುತಿ ದೇವಸ್ಥಾನದ ಲೈನ್, ಅಸೂಟಿಯವರ ಲೈನ್, ಕಣವಿ ಅವರ ಲೈನ್, ಮಾಳಿಕೋಟಿಯವರ ಸಂದಿ, ವಿ ಆರ್ ಎಲ್ ಆಫೀಸ್ ಲೈನ್,

ವಾರ್ಡ್ ನಂ. 30 ಟಿವಿಎಸ್ ಶೋರೂಮ್, ಮುತ್ತಿನಪೆಂಡಿಮಠ ಲೇಔಟ್, ಅಬ್ಬಿಗೇರಿ ಲೇಔಟ್, ಪೊಲೀಸ್ ಕ್ವಾರ್ಟರ್ಸ್, ಪಾಸಿಯವರ ಲೈನ್, ವಾರ್ಡ್ ನಂ. 22 ದೊಡ್ಡ ಮಸೀದಿ ಹತ್ತಿರ ಹಿಂದಿನ ಭಾಗ ಮುಂದಿನ ಭಾಗ, ಕನ್ನಡ ಶಾಲೆ ಲೈನ್, ಶುದ್ಧ ನೀರಿನ ಘಟಕ ಭಾಗ-1,2,3, ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಕೆಳಗಿನ ಭಾಗ ಮೇಲಿನ ಭಾಗ, ಆದಿಶಕ್ತಿಯ ಗುಡಿಯ ಸುತ್ತಮುತ್ತಲಿನ ಭಾಗಗಳು, ಕ್ರಿಶ್ಚಿಯನ್ ಕಾಲೋನಿ, ಆಟೋ ಕಾಲೋನಿಯ ಕೆಲವು ಭಾಗಗಳು.

ವಾರ್ಡ್ ನಂ. 35, 34, 30 ಈಡಬ್ಲ್ಯೂಎಸ್, ಮೂರು ಶಿಳ್ಳಿನ ವಕಾರ, ಹೂಗಾರ ಪ್ಲಾಟ್, ಡಿಪೋ ಹಿಂದಿನ ಭಾಗ, ವಡ್ಡರಗೇರಿ ಮೇಲಿನ ಭಾಗ, 46 ಪ್ಲಾಟ್, ಶಿವಾನಂದ ನಗರ, ಕುಂಚಿ ಕೊರವರ ಓಣಿ, ಬಸವೇಶ್ವರ ಸ್ಕೂಲ್ ಲೈನ್, ವಾರ್ಡ್ ನಂ. 29 ಸಾಯಿ ನಗರ, ಪಂಚಾಕ್ಷರಿ ನಗರ, ಕಲಾಮಂದಿರ ನಗರ, ಮಸೂತಿ ಲೈನ್ ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡೆತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸ ಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ಮೇರಿ ಮಿಟ್ಟಿ ಮೇರಾ ದೇಶ' ಅಮೃತ ಕಳಸ ಹಸ್ತಾಂತರಿಸಿದ ಉಷಾ ದಾಸರ ಅಭಿಮತ

## ದೇಶ ಕಾಯುವ ಸೈನಿಕರನ್ನು ಪ್ರತಿಯೊಬ್ಬರೂ ಗೌರವಿಸಿ



**■ವಿಜಯಸಾಕ್ಷಿ ಸುದ್ದಿ, ಗದಗ**

ನಮ್ಮ ದೇಶವು ಉತ್ತಮ ಪರಿಸರ, ಹವಾಗುಣ ಹೊಂದಿರಲು ಇಲ್ಲಿನ ಮಣ್ಣಿನ ಗುಣ ಮುಖ್ಯವಾಗಿದೆ. ಅನೇಕ ಮಹಾತ್ಮರ ಹೋರಾಟದಿಂದಾಗಿ ಮತ್ತು ತ್ಯಾಗದಿಂದಾಗಿ ನಮ್ಮ ದೇಶ ಸ್ವಾತಂತ್ರ್ಯ ಪಡೆದು ಅಭಿವೃದ್ಧಿಯುತ್ತ ಸಾಗುತ್ತಿದೆ. ಪ್ರತಿ ಗ್ರಾಮ ಪಂಚಾಯಿತಿಯಿಂದ ಮಣ್ಣು ಸಂಗ್ರಹಿಸಿ, ಜನರಲ್ಲಿ ಮಣ್ಣು ಮತ್ತು ದೇಶದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಯ ಒಂದು ಹಿಡಿ ಮಣ್ಣನ್ನು ದೆಹಲಿಗೆ ತಲುಪಿಸಲಾಗುತ್ತದೆ ಎಂದು ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ಮಹೇಶ ದಾಸರ ನುಡಿದರು.

ಗದಗ-ಬೆಟಗೇರಿ ನಗರಸಭೆ, ನೆಹರು ಯುವ ಕೇಂದ್ರ ಗದಗ, ವಾಯ್.ಪಿ ಗಾಲಾ ಸ್ಕೂಲ್ ಆಫ್ ನರ್ಸಿಂಗ್ ಸಹಯೋಗದಲ್ಲಿ 'ನನ್ನ ಮಣ್ಣು-ನನ್ನ ದೇಶ' ಜಾಥಾದಲ್ಲಿ ಮೇರಿ ಮಿಟ್ಟಿ ಮೇರಾ ದೇಶ ಅಮೃತ ಕಳಸವನ್ನು ಹಸ್ತಾಂತರಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಅಭಿಯಂತರ ಟಿ.ಎಚ್ ದ್ಯಾವನೂರ, ಕಚೇರಿಯ ವ್ಯವಸ್ಥಾಪಕ ಪರಶುರಾಮ ಶೇರಖಾನೆ, ಪರಿಸರ ಅಭಿಯಂತರ ಆನಂದ ಬದಿ, ಎಂ.ಎಂ ಮಕಾನದಾರ, ಕೆಂಚಪ್ಪ ಪೂಜಾರಿ, ಸಂಕನಗೌಡ್ರು, ನೆಹರು ಯುವ ಕೇಂದ್ರದ ಅಧಿಕಾರಿ ರಂಜನಿ, ಶ್ರೀಮತಿ ಮಕಾನದಾರ, ಶ್ರೀಮತಿ ಯಾದವಾಡ, ಸಂಜು ಅಗಸಿಮನಿ, ಎಸ್.ವ್ಹಿ ತೋಟಗಿ, ಎಂ.ಕೆ ಗುಡಿಸಾಗರ, ರಾಜು ಕಾಗನೂರ, ರಾಕೇಶ ಮುಟಗಿ, ಗೀತಾ ಹರಿಜನ, ವಿಶ್ವ ತಿಮ್ಮಾಪೂರ, ವಾಯ್.ಪಿ ಗಾಲಾ ಸ್ಕೂಲ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳು ಸೇರಿದಂತೆ ನಗರಸಭೆಯ ಸಿಬ್ಬಂದಿ ವರ್ಗದವರು, ಪೌರ ಕಾರ್ಮಿಕರು ಉಪಸ್ಥಿತರಿದ್ದರು.

> ದೇಶಕ್ಕಾಗಿ ಪ್ರಾಣವನ್ನೇ ಅರ್ಪಿಸಿದ ವೀರ ಪುರುಷ ಹಾಗೂ ವೀರ ನಾರಿಯರನ್ನು ಗೌರವಿಸುವ ಹಿನ್ನೆಲೆಯಲ್ಲಿ ಈ ಅಭಿಯಾನ ಪ್ರಾರಂಭವಾಗಿದೆ. ಇದು ದೇಶಾದ್ಯಂತ ನಡೆಯುತ್ತಿರುವುದು ವಿಶೇಷವಾಗಿದೆ. ದೇಶದ ಭದ್ರತೆಗಾಗಿ, ಹೋರಾಟದ ನಡುವೆ ಪ್ರಾಣ ತ್ಯಾಗ ಮಾಡಿದ ಸೈನಿಕರನ್ನು ಪ್ರತಿಯೊಬ್ಬ ಭಾರತೀಯನೂ ಗೌರವಿಸಬೇಕು.
>
> **- ಉಷಾ ದಾಸರ.**
> ಅಧ್ಯಕ್ಷರು, ನಗರಸಭೆ.



### ಎಸ್‌ಎಸ್‌ಕೆ ಸಮಾಜದಿಂದ ಶಾಸಕ ಜಿ.ಎಸ್ ಪಾಟೀಲರಿಗೆ ಸನ್ಮಾನ

## ನಮ್ಮ ಸಂಸ್ಕೃತಿ, ಪರಂಪರೆ ಅರಿಯಬೇಕಿದೆ



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಹಬ್ಬಗಳು ಕೇವಲ ಸಂಭ್ರಮಕ್ಕೆ ಸಿಮೀತವಾಗದೆ ಧಾರ್ಮಿಕ ಕಾರ್ಯಕ್ರಮಗಳ ಸಂಪ್ರದಾಯ ಮತ್ತು ಆಚರಣೆಯ ಮಹತ್ವವನ್ನು ಅರಿತುಕೊಳ್ಳಲು ಯುವ ಸಮೂಹ ಮುಂದಾಗಬೇಕು ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಸ್ಥಳೀಯ ಎಸ್‌ಎಸ್‌ಕೆ ಸಮಾಜದಿಂದ ಪಟ್ಟಣದ ಜಗದಂಬಾ ದೇವಸ್ಥಾನದಲ್ಲಿ ದಸರಾ ನವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಆಚರಿಸುತ್ತಿರುವ ಪ್ರತಿಯೊಂದು ಹಬ್ಬ, ಆಚರಣೆ ಹಾಗೂ ಸಂಪ್ರದಾಯಗಳಿಗೆ ತನ್ನದೇ ಆದ ಹಿನ್ನೆಲೆ ಮತ್ತು ಐತಿಹ್ಯಗಳಿವೆ. ಹೀಗಾಗಿ ಯುವ ಸಮೂಹವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಅರಿತುಕೊಳ್ಳಬೇಕಿದೆ ಎಂದ ಅವರು, ಆಧುನಿಕ ಜೀವನ ಶೈಲಿಯು ನಮ್ಮ ದೇಶದ ಹಾಗೂ ನಾಡಿನ ಸಂಸ್ಕೃತಿಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ ಎನ್ನುವ ವರದಿಗಳಿವೆ. ಹೀಗಾಗಿ ಪಾಲಕರು ಯುವ ಸಮೂಹಕ್ಕೆ ಕೂಡಿ ಬಾಳುವುದು, ಅರಿತು ನಡೆಯುವುದು ಹಾಗೂ ನಮ್ಮತನವನ್ನು ಉಳಿಸಿಕೊಳ್ಳಲು ಧಾರ್ಮಿಕ ಕಾರ್ಯಕ್ರಮಗಳು ಸಹಕಾರಿ ಎಂಬ ಸಂದೇಶವನ್ನು ನೀಡುವ ಅವಶ್ಯಕತೆಯಿದೆ. ನಾಡಿನ ಹಬ್ಬವಾಗಿರುವ ದಸರಾ ನವರಾತ್ರಿಯು ಎಲ್ಲರಿಗೂ ಸುಖ, ಸಮೃದ್ಧಿ ಹಾಗೂ ಐಶ್ವರ್ಯವನ್ನು ತಾಯಿ ಜಗದಂಬಾ ದೇವಿ ಕರುಣಿಸಲಿ ಎಂದು ಪ್ರಾರ್ಥಿಸುವೆ ಎಂದರು.

ಈ ವೇಳೆ ಎಸ್‌ಎಸ್‌ಕೆ ಸಮಾಜದಿಂದ ಶಾಸಕ ಜಿ.ಎಸ್ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಆರ್.ಎಂ ರಾಯಭಾಗಿ ಅವರ ಕುಟುಂಬದಿಂದ 2 ಸಾವಿರಕ್ಕೂ ಅಧಿಕ ಭಕ್ತಾಧಿಗಳಿಗೆ ಉಪಹಾರ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಮಾಜದ ಅಧ್ಯಕ್ಷ ಆರ್.ಎಂ ರಾಯಬಾಗಿ, ಕೆ.ಎಸ್ ಪವಾರ, ವಿಶ್ವನಾಥ ಮೇಘರಾಜ, ಸುರೇಂದ್ರಸಾ ರಾಯಬಾಗಿ, ರವಿಂದ್ರಸಾ ಚವಡಿಮನಿ, ರಾಮು ರಾಯಬಾಗಿ, ಬಾಬಣ್ಣಸಾ ರಾಯಬಾಗಿ, ಗ್ಯಾನ್ನುಸಾ ರಾಯಬಾಗಿ, ಅಶೋಕ ರಾಯಬಾಗಿ ಮುಂತಾದವರಿದ್ದರು.

### ಪ್ರತಿಭಟನಾ ರ್‍ಯಾಲಿಯಲ್ಲಿ ಕಾಂಗ್ರೆಸ್ ಸರಕಾರ ವಿರುದ್ಧ ಶಾಸಕ ಡಾ.ಚಂದ್ರು ಲಮಾಣಿ ಆರೋಪ

## ಬರಗಾಲ ನಿರ್ವಹಣೆಯಲ್ಲಿ ಸರ್ಕಾರ ವಿಫಲ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ರೈತರಿಗೆ 7 ಗಂಟೆ ತ್ರಿಫೇಸ್ ವಿದ್ಯುತ್ ನೀಡುವುದಾಗಿ ಹೇಳಿ, ಈಗ 2-3 ತಾಸು ಲೋಡ್ ಶೆಡ್ಡಿಂಗ್ ಮಾಡುತ್ತಿದೆ. ತಾಲೂಕನ್ನು ಬರಗಾಲ ಪೀಡಿತವೆಂದು ಘೋಷಿಸಿದ್ದರೂ ಇವರೆಗೆ ಒಂದು ರೂಪಾಯಿ ಪರಿಹಾರ ಬಂದಿಲ್ಲ, ಬರಗಾಲ ನಿರ್ವಹಣೆ ಸಮರ್ಪಕವಾಗಿ ಮಾಡುತ್ತಿಲ್ಲ. ಕಾವೇರಿ ನದಿಯಿಂದ ನಿತ್ಯವೂ ತಮಿಳುನಾಡಿಗೆ ನೀರು ಬಿಡುತ್ತಾ ರೈತ ಸಮೂಹಕ್ಕೆ ಅನ್ಯಾಯ ಮಾಡುತ್ತಿದೆ. ಈ ಕೂಡಲೇ ನೈತಿಕ ಹೊಣೆ ಹೊತ್ತು ಸಿಎಂ ಹಾಗೂ ಡಿಸಿಎಂ ರಾಜೀನಾಮೆ ನೀಡಬೇಕೆಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಬುಧವಾರ ಶಿರಹಟ್ಟಿಯ ನೆಹರು ವೃತ್ತದಲ್ಲಿ ಬಿಜೆಪಿ ವತಿಯಿಂದ ಕಾಂಗ್ರೆಸ್ ಸರಕಾರದ ವಿರುದ್ಧ ಹಮ್ಮಿಕೊಂಡಿದ್ದ ಪ್ರತಿಭಟನಾ ರ್‍ಯಾಲಿಯಲ್ಲಿ ಮಾತನಾಡಿದರು.

ಈ ಹಿಂದೆ ಬಿಜೆಪಿ ಸರಕಾರ ಜನತೆಗೆ 10 ಕೆಜಿ ಅಕ್ಕಿಯನ್ನು ನೀಡುತ್ತಿತ್ತು. ▶▶3 ನೇ ಪುಟಕ್ಕೆ

### 'ನಮ್ಮೂರ ದಸರಾ ದರ್ಬಾರ' ಕಾರ್ಯಕ್ರಮದಲ್ಲಿ ಎಸ್.ಪಿ ಬಿ.ಎಸ್ ನೇಮಗೌಡ ಅಭಿಮತ

## ಎಸ್‌ಎಸ್‌ಕೆ ಸಮಾಜ ಪ್ರೀತಿ-ವಿಶ್ವಾಸಕ್ಕೆ ಹೆಸರುವಾಸಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಎಸ್‌ಎಸ್‌ಕೆ ಸಮಾಜವು ಸರ್ವಧರ್ಮ ಸಮನ್ವಯತೆ, ಆತ್ಮೀಯತೆ ಹಾಗೂ ಭ್ರಾತೃತ್ವಕ್ಕೆ ಪಾತ್ರವಾಗಿದೆ. ಇಲ್ಲಿನ ಅಚ್ಚುಕಟ್ಟಾದ ವ್ಯವಸ್ಥೆ, ದಸರಾ ಆಚರಣೆಯಿಂದ ಮನಸೂರೆಗೊಂಡಿದ್ದು ನಾನೂ ಮೈಸೂರು ದಸರಾದಲ್ಲಿ ಭಾಗಿಯಾದಷ್ಟು ಸಂತಸವಾಗಿದೆ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಅಭಿಪ್ರಾಯಪಟ್ಟರು.

ನಗರದ ಹಳೇ ಸರಾಫ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಶ್ರೀ ಸಹಸ್ರಾರ್ಜುನ ಸಮುದಾಯ ಭವನದಲ್ಲಿ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಫಕೀರಸಾ ಬಾಂಡಗೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಎಸ್‌ಎಸ್‌ಕೆ ಸಮಾಜದ ಉಪಾಧ್ಯಕ್ಷ ರಾಜು ಬದಿ, ಗೌರವ ಕಾರ್ಯದರ್ಶಿ ವಿನೋದ ಶಿದ್ಲಿಂಗ, ಸಹಕಾರ್ಯದರ್ಶಿ ರವಿ ಶಿದ್ಲಿಂಗ, ದಸರಾ ಕಮಿಟಿ ಚೇರಮನ್ ವಿನೋದ ಬಾಂಡಗೆ, ವೈಸ್ ಚೇರಮನ್ ವಿಷ್ಣುಸಾ ಶಿದ್ಲಿಂಗ ಉಪಸ್ಥಿತರಿದ್ದರು.

ಎಸ್‌ಎಸ್‌ಕೆ ಸಮಾಜದ ಪಂಚ ಕಮಿಟಿ ಸದಸ್ಯರಾದ ವಿಶ್ವನಾಥಸಾ ಖಟವಟೆ, ಸುರೇಶಕುಮಾರ ಬದಿ, ಬಲರಾಮ ಬಸವಾ, ಎನ್.ಆರ್ ಖಟವಟೆ, ಗಂಗಾಧರ ಹಬೀಬ, ಅನಿಲ್ ಖಟವಟೆ, ಮಾರುತಿ ಪವಾರ, ಪರಶುರಾಮಸಾ ಬದಿ, ಗಣಪತಸಾ ಜೀತೂರಿ, ಅಂಬಾಸಾ ಖಟವಟೆ, ದಸರಾ ಕಮಿಟಿಯ ಪದಾಧಿಕಾರಿಗಳಾದ ಪರಶುರಾಮ ಹಬೀಬ, ವೆಂಕಟೇಶ ಹಬೀಬ, ಉದ್ಯಮಿ ಎಸ್.ಡಿ ಪವಾರ, ವಿಶ್ವನಾಥ ಸೂಳಂಕಿ, ಮಾಧು ಬದಿ, ನಾಗರಾಜ ಖೋಡೆ, ಶ್ರೀಕಾಂತ ಬಾಕಳೆ, ಗೋಪಾಲ ನಾಕೋಡ್, ಸುಧೀರ ಕಾಟಿಗರ, ಕಿಶನ್ ಮೇರವಾಡೆ, ಶ್ರೀಕಾಂತ ಅರಸಿದ್ದಿ, ಜಗದೀಶ ಪವಾರ, ಚಂದನ ಖಟವಟೆ, ರೇಖಾ ಖಟವಟೆ, ರೇಣುಕಾ ಕಲಬುರ್ಗಿ, ಶಾಂತಾಬಾಯಿ ಬಾಕಳೆ, ಅಂಬಿಕಾ ಬಾಂಡಗೆ ಮುಂತಾದವರು ಉಪಸ್ಥಿತರಿದ್ದರು. ಜಿ.ಎನ್ ಹಬೀಬ ನಿರೂಪಿಸಿದರು. ಮೋತಿಲಾಲಸಾ ಪೂಜಾರಿ ವಂದಿಸಿದರು.

> ಬೆಂಗಳೂರಿನ ಸಿಐಡಿಯ ಕಾನೂನು ಸಲಹೆಗಾರರಾದ ಮಹೇಶ ವೈದ್ಯ ಮಾತನಾಡಿ, ಹಿಂದೂ ಹಬ್ಬಗಳು ಸನಾತನ ಧರ್ಮದ ಗಟ್ಟಿ ಬೇರುಗಳಾಗಿವೆ. ಇಂತಹ ಹಬ್ಬಗಳಲ್ಲಿ ಮಹಿಳೆಯರಿಗೆ ಲಲಿತಾ ಸಹಸ್ರನಾಮ ಹಾಗೂ ಯುವಕರಿಗೆ ಭಕ್ತಿಯೋಗ, ಧ್ಯಾನ ಯೋಗ, ಭಜನೆ ಹಾಗೂ ಭಗವದ್ಗೀತೆ ಹೇಳಿಕೊಡಬೇಕು. ಧರ್ಮ ಉಳಿಯಲು ಇವುಗಳು ಮುಖ್ಯವಾಗಿವೆ ಎಂದು ಹೇಳಿದರು.

## ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2023-24ನೇ ಸಾಲಿಗೆ ಹೊಸದಾಗಿ ಮತ್ತು ನವೀಕರಣಕ್ಕೆ 1 ರಿಂದ 8ನೇ ತರಗತಿ ವ್ಯಾಸಾಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವರ್ಗದವರು ಎಸ್.ಎಸ್.ಪಿ. ವಿದ್ಯಾರ್ಥಿ ವೇತನಕ್ಕಾಗಿ https://ssp.postmatric.karnataka.gov.in ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ಈ ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ನವೆಂಬರ್ 30 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿಗಳಾದ ಅಮಿತ್ ಬಿದರಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ : ಮಾಹಿತಿ ಕೇಂದ್ರ ಗದಗ-9901132191, ಶಿರಹಟ್ಟಿ-9591705863, ಮುಂಡರಗಿ-9916689778, ನರಗುಂದ-9901501170, ರೋಣ-9964490088 ಸಂಪರ್ಕಿಸಬಹುದಾಗಿದೆ.

## ಅ.27 ರಿಂದ ತುಮಕೂರಿನಲ್ಲಿ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ

**■ವಿಜಯಸಾಕ್ಷಿ ಸುದ್ದಿ, ಗದಗ**

2022-23ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಅಕ್ಟೋಬರ್ 27 ರಿಂದ 29 ರವರೆಗೆ ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ಸಂಘಟಿಸಲಾಗಿದೆ.

ಗದಗ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವೈಯಕ್ತಿಕ ವಿಭಾಗದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು ಹಾಗೂ ಗುಂಪು ಸ್ಪರ್ಧೆಗಳಲ್ಲಿ ಪ್ರಥಮ/ ಆಯ್ಕೆ ತಂಡ ಹಾಗೂ ರಿಲೇಯಲ್ಲಿ ಪ್ರಥಮ ಸ್ಥಾನ ಪಡೆದವರು ಮಾತ್ರ ಭಾಗವಹಿಸಲು ಅರ್ಹರಿರುವರು. ಈಗಾಗಲೇ ಸಂಘದ ವತಿಯಿಂದ ಆನ್‌ಲೈನ್ ನಲ್ಲಿ ಸೂಚಿಸಿದಂತೆ ನೋಂದಣಿ ಮಾಡಿಕೊಂಡ ಕ್ರೀಡಾಪಟುಗಳು ಅಕ್ಟೋಬರ್ 27 ರಂದು ಬೆ 8 ಗಂಟೆಗೆ ತುಮಕೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುತಿನ ಚೀಟಿಯೊಂದಿಗೆ ಕಡ್ಡಾಯವಾಗಿ ಭಾಗವಹಿಸಲು ಕೋರಿದೆ.

ಗದಗ ಜಿಲ್ಲೆಯ ಸಹಾಯಕ ನಿರ್ದೇಶಕರು ನೀಡುವ ಗುರುತಿನ ಚೀಟಿಯನ್ನು ವಿಜೇತ ಕ್ರೀಡಾ ಪಟುಗಳು ಸಹಾಯಕ ನಿರ್ದೇಶಕ ಕಾರ್ಯಾಲಯ, ಕೆ.ಎಚ್.ಪಾಟೀಲ, ಜಿಲ್ಲಾ ಕ್ರೀಡಾಂಗಣ ಗದಗ ಇಲ್ಲಿ ಪಡೆದುಕೊಳ್ಳಲು ಪ್ರಕಟಣೆ ತಿಳಿಸಿದೆ.

### ಕಾಂತರಾಜ ವರದಿ ಬಿಡುಗಡೆಗೆ ಆಗ್ರಹಿಸಿ ಮುಖ್ಯಮಂತ್ರಿಗಳಿಗೆ ಮನವಿ

## ಕಾಂತರಾಜ ವರದಿ ಬಿಡುಗಡೆಗೆ ಮುಂದಾಗಿ




**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಹಿಂದುಳಿದ ಸಮುದಾಯಗಳ ಅಭಿವೃದ್ಧಿಯೊಂದಿಗೆ ಪ್ರಾತಿನಿಧಿತ್ವ ಮತ್ತು ಅವಕಾಶಕ್ಕಾಗಿ ರಾಜ್ಯ ಸರ್ಕಾರವು ಕಾಂತರಾಜ್ ವರದಿ ಬಿಡುಗಡೆಗೆ ತಕ್ಷಣವೇ ಮುಂದಾಗಬೇಕು ಎಂದು ಆಗ್ರಹಿಸಿ ಬುಧವಾರ ಪಟ್ಟಣದಲ್ಲಿ ಕಾಂತರಾಜ ವರದಿ ಜಾರಿ ಸಮನ್ವಯ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ಮೀಸಲಾತಿ ಜಾರಿಗೆ ಹಿಂದಿನಿಂದಲೂ ಸಹ ಕೆಲ ಶಕ್ತಿಗಳ ಪ್ರಭಲ ವಿರೋಧದ ನಡುವೆ ದೇಶದಲ್ಲಿ ಮಂಡಲ ಆಯೋಗ ರಚನೆಯಾದ ಬಳಿಕ ಹಿಂದುಳಿದ ವರ್ಗಗಳಿಗೆ ಶೇ 27 ಮೀಸಲಾತಿ ಸಿಕ್ಕಿದೆ. ಆದರೆ ಈ ಬಗ್ಗೆ ಸಮಗ್ರ ಮಾಹಿತಿ ಸರ್ಕಾರಗಳ ಬಳಿಯಿಲ್ಲ. ಹಿಂದುಳಿದ ವರ್ಗ ಎಂದರೆ ಎಲ್ಲರೂ ಹಿಂದುಳಿದ ವರ್ಗ ಎಂದು ಮುಂದೆ ಬರುತ್ತಿರುವ ಪರಿಣಾಮ ಹಿಂದುಳಿದ ವರ್ಗದಲ್ಲಿ ಶೋಷಣೆಗೆ ಒಳಗಾದವರ ಸ್ಪಷ್ಟ ಅಂಕಿ ಸಂಖ್ಯೆ ಬಿಡುಗಡೆ ಪ್ರಸ್ತುತ ದಿನದಲ್ಲಿ ಅವಶ್ಯಕವಾಗಿದೆ.

ಸರ್ಕಾರಿ ಸೌಲಭ್ಯ, ಆರ್ಥಿಕ ಪ್ರಗತಿಗೆ ಹಾಗೂ ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಮಡಿವಾಳ, ಕುಂಬಾರ, ಹಡಪದ ಹಾಗೂ ಹೂಗಾರ ಸಮುದಾಯಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಸಿಗುತ್ತಿಲ್ಲ. ಹಿಂದುಳಿದ ವರ್ಗಗಳಲ್ಲಿ ಯಾವ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹೊಂದಿರುವ ಸ್ಥಾನಮಾನಗಳನ್ನು ತಿಳಿಯಲು ಕಾಂತರಾಜು ವರದಿ ಬಿಡುಗಡೆ ಅವಶ್ಯಕವಾಗಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಅವರು ಕಾಂತರಾಜ ವರದಿಯನ್ನು ಒಪ್ಪಿಕೊಂಡು ಬಿಡುಗಡೆಗೆ ಮುಂದಾಗಬೇಕು ಎಂದು ಒತ್ತಾಯಿಸುತ್ತಿದ್ದೇವೆ ಎಂದರು.

ಮುಖಂಡರಾದ ಎಂ.ಎಸ್ ಹಡಪದ, ಶಶಿಧರ ಹೂಗಾರ, ಬಸವರಾಜ ಹೂಗಾರ, ದೇವಪ್ಪ ಮಡಿವಾಳರ, ಬಿ.ಎಂ ಕುಂಬಾರ, ಮುತ್ತಪ್ಪ ಹಡಪದ, ಮಹಾದೇವಪ್ಪ ಮಡಿವಾಳರ, ರವಿ ಹೊನವಾಡ, ಲಿಂಗಪ್ಪ ಹೂಗಾರ, ಶಿವಾನಂದ ಮಡಿವಾಳರ ಮುಂತಾದವರಿದ್ದರು.

> ಮನವಿ ಸಲ್ಲಿಕೆಗೂ ಮುನ್ನ ತಹಸೀಲ್ದಾರ್ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ಕೆ.ಕೆ ವೃತ್ತ, ಜೋಡು ರಸ್ತೆ, ಶಿವಾಜಿ ವೃತ್ತ, ಅಂಬೇಡ್ಕರ ವೃತ್ತ, ದುರ್ಗಾ ವೃತ್ತ ಮೂಲಕ ಮರಳಿ ಕೆ.ಕೆ ವೃತ್ತಕ್ಕೆ ಆಗಮಿಸಿದ ಬಳಿಕ ಪ್ರತಿಭಟನಾಕಾರರು ತಹಸೀಲ್ದಾರ್ ಮೂಲಕ ಸಿಎಂಗೆ ಮನವಿ ನೀಡಿದರು.

## ಸಾಕ್ಷಿ ಸುಭಾಷಿತ

ಇಂದು ಮಾಡಬಹುದಾದುದನ್ನು
ನಾಳೆಗೆ ಎಂದೂ ಬಿಡಬೇಡ
–ಸುಭಾಷಿತ

## ಸಂಪಾದಕೀಯ

# ಭಯ ಮುಕ್ತ ಭ್ರಷ್ಟಾಚಾರಕ್ಕೆ ಅವಕಾಶ

ಸರ್ಕಾರಿ ನೌಕರನ ಮೇಲೆ ಕ್ರಿಮಿನಲ್ ಪ್ರಕರಣವಿದೆ ಎನ್ನುವ ಕಾರಣಕ್ಕೆ ಬಡ್ತಿ ನೀಡದಿರುವುದು ತಪ್ಪು ಎಂದು ಹೈಕೋರ್ಟ್ ತಿಳಿಸಿದೆ.

ಹೈಕೋರ್ಟ್ ಸೂಚನೆ ಅತ್ಯಂತ ಸೂಕ್ತವಾಗಿದೆ. ಆದರೆ ಆ ಸರಕಾರಿ ನೌಕರನ ಮೇಲಿರುವ ಪ್ರಕರಣ ಎಂತಹದು ಎನ್ನುವುದನ್ನು ತಿಳಿದುಕೊಂಡು, ಬಡ್ತಿ ನೀಡಬೇಕು ನೀಡಬಾರದು ಎನ್ನುವ ಕುರಿತು ಕೋರ್ಟ್ ಸ್ಪಷ್ಟವಾದಂತಹ ಸೂಚನೆ ನೀಡಬೇಕು.

ಭ್ರಷ್ಟಾಚಾರ ನಡೆಸಿ ಕ್ರಿಮಿನಲ್ ಮೊಕದ್ದಮೆ ದಾಖಲಾದರೆ ಬಡ್ತಿಯಿಂದ ವಂಚಿತರಾಗಬೇಕಾಗುತ್ತದೆ ಎನ್ನುವ ಕಾರಣಕ್ಕೆ ಅನೇಕ ನೌಕರರು ಅಲ್ಪ ಮಟ್ಟಿಗಾದರೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದರು.

ಬಡ್ತಿ ಮಾತ್ರವಲ್ಲ ಪಿಂಚಣಿ ಮತ್ತು ನಿವೃತ್ತಿ ನಂತರದ ಸೌಲಭ್ಯಗಳನ್ನು ತಡೆಹಿಡಿಯಲಾಗುತ್ತದೆ ಎನ್ನುವ ಕಾರಣಕ್ಕಾದರೂ ಸರ್ಕಾರಿ ನೌಕರರು, ಅನಿವಾರ್ಯವಾಗಿಯಾದರೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದರು.

ಆದರೆ ಹೈಕೋರ್ಟ್‌ನ ಈ ಸೂಚನೆಯಿಂದ ಸರ್ಕಾರಿ ನೌಕರರಿಗೆ ಅಂತಹ ಯಾವುದೇ ಭಯ ಇಲ್ಲದಂತಾಗುತ್ತದೆ. ರಾಜ ರೋಷವಾಗಿ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಲು ಕೋರ್ಟ್ ಅವಕಾಶ ನೀಡಿದಂತಾಗಿದೆ.

ಮತ್ತೊಂದೆಡೆ ಕೆಲ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಸುಳ್ಳು ಕೇಸುಗಳನ್ನು ಸಹ ದಾಖಲಿಸಿದ ಉದಾಹರಣೆಗಳಿವೆ. ಅಂಥವರನ್ನ ಪರಿಗಣಿಸುವುದಾದರೆ ಕೋರ್ಟ್ ತೀರ್ಪು ಅತ್ಯಂತ ಸೂಕ್ತವಾಗಿದೆ. ದುರುದ್ದೇಶದಿಂದ ಕೇಸ್‌ಗಳನ್ನು ದಾಖಲಿಸಿ ಸರ್ಕಾರಿ ಅಧಿಕಾರಿಗಳಿಗೆ ಕಿರುಕುಳ ನೀಡುವಂತಹ ಪ್ರಕರಣಗಳಲ್ಲಿ ಕೋರ್ಟ್ ನಿರ್ಧಾರ ಸ್ತುತ್ಯಾರ್ಹವಾಗಿದೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಪ್ರಾಮಾಣಿಕ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಗಳಿಂದ ದೂರವೇ ಇಡುವಂತಹ ವ್ಯವಸ್ಥೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಹೀಗಾಗಿ ಎಲ್ಲ ಸರ್ಕಾರಿ ನೌಕರರನ್ನ ಸಂಪೂರ್ಣವಾಗಿ ಪ್ರಾಮಾಣಿಕರು ಎಂದು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಅಂತಹ ಪರಿಸ್ಥಿತಿ ರಾಜ್ಯದಲ್ಲಿ ಸದ್ಯಕ್ಕೆ ಕಾಣಲು ಸಾಧ್ಯವಿಲ್ಲ.

ಹೀಗಾಗಿ ಹೈಕೋರ್ಟ್ ತನ್ನ ನಿರ್ಧಾರವನ್ನ ಮರು ಪರಿಶೀಲನೆ ಮಾಡಬೇಕು.

ಸರ್ಕಾರಿ ನೌಕರರ ಮೇಲಿನ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು. ಅಧಿಕಾರಿಗಳು ತಪ್ಪು ಮಾಡಿದ್ದರೆ ತಕ್ಷಣ ಶಿಕ್ಷೆ ಜಾರಿ ಆಗಬೇಕು. ನಿರಪರಾಧಿಗಳಾದರೆ ಅವರಿಗೆ ಸಿಗಬೇಕಾದ ಬಡ್ತಿ ಮತ್ತು ಇನ್ನಿತರ ಸೌಲಭ್ಯಗಳನ್ನ ತಕ್ಷಣಕ್ಕೆ ನೀಡುವಂಥ ಕಾನೂನು ಜಾರಿಯಾಗಬೇಕು.



ಗದಗ ತಾಲೂಕಿನ ನರಸಾಪುರ ಗ್ರಾಮ ದೇವತೆ ದೇವಸ್ಥಾನದಲ್ಲಿ ನವರಾತ್ರಿ ಆಚರಣೆಯ ನಿಮಿತ್ತ ಶ್ರೀ ಲಕ್ಕಮ್ಮದೇವಿಗೆ ವಿಶೇಷ ಅಲಂಕಾರ ನೆರವೇರಿಸಲಾಯಿತು.

## ಉದ್ಯೋಗವರಸಿ ವಲಸೆ ಹೊರಟ ತಾಂಡಾ ನಿವಾಸಿಗಳು

■ವಿಜಯಸಾಕ್ಷಿ ಸುದ್ದಿ, ಹೊಸಪೇಟೆ

ವಿಜಯನಗರ ಜಿಲ್ಲೆಯಲ್ಲಿ ಉಂಟಾಗಿರುವ ತೀವ್ರ ಬರಗಾಲ ಇಲ್ಲಿನ ತಾಂಡಾ ನಿವಾಸಿಗಳು ಉದ್ಯೋಗ ಹುಡುಕಿಕೊಂಡು ಬೇರೆ ನಗರಗಳಿಗೆ ಒತ್ತಾಯಪೂರ್ವಕವಾಗಿ ವಲಸೆ ಹೋಗುವಂತೆ ಮಾಡಿದೆ.

ಇಲ್ಲಿನ ತಾಂಡಾ ಸಮುದಾಯದ ಹಲವರ ಗುಡಿಸಲುಗಳ ಬಾಗಿಲು ಕೀಲಿಹಾಕಿದ್ದು ಇಲ್ಲಿನ ಗ್ರಾಮಸ್ಥರು ಕೆಲಸ ಹುಡುಕಿಕೊಂಡು ಉತ್ತಮ ಪ್ರದೇಶಗಳು, ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಅಧಿಕಾರಕ್ಕೆ ಬರುವ ಸರ್ಕಾರಗಳು ತಾಂಡಾ ಸಮುದಾಯದವರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಪ್ರತಿಬಾರಿ ಭರವಸೆ ನೀಡಿದರೂ ವಲಸೆ ಹೋಗುವವರ ಸಂಖ್ಯೆಯೇನೂ ಕಡಿಮೆಯಾಗಿಲ್ಲ.

ಸಾಮಾನ್ಯವಾಗಿ, ತಾಂಡಾಗಳಲ್ಲಿ ವಾಸಿಸುವ ಲಂಬಾಣಿ ಸಮುದಾಯದ ಜನರು ವಿವಿಧ ಕಾರಣಗಳಿಗಾಗಿ ಇತರ ನಗರಗಳಿಗೆ ವಲಸೆ ಹೋಗುತ್ತಾರೆ. ಕಳೆದ ವರ್ಷ ವಿಜಯನಗರ ಮೂಲದ ಒಂದೇ ಕುಟುಂಬದ ನಾಲ್ವರು ಮಕ್ಕಳು ಉದ್ಯೋಗ ಅರಸಿ ಮಂಡ್ಯಕ್ಕೆ ವಲಸೆ ಹೋಗಿ ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದರು. ಅನಾವೃಷ್ಟಿ ಮತ್ತು ಅತಿವೃಷ್ಟಿಯಂತಹ ಸಂದರ್ಭಗಳಲ್ಲಿ, ಸಮುದಾಯದ ಜನರು ಉದ್ಯೋಗವನ್ನು ಹುಡುಕಿಕೊಂಡು ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಮಹಾರಾಷ್ಟ್ರ ಮತ್ತು ಗೋವಾದಂತಹ ಇತರ ರಾಜ್ಯಗಳಿಗೆ ವಲಸೆ ಹೋಗುತ್ತಾರೆ. ಸ್ಥಳೀಯ ಉದ್ಯೋಗ ಸೃಷ್ಟಿಗೆ ಸರಕಾರ ಒತ್ತು ನೀಡಬೇಕು ಎಂದು ಇಲ್ಲಿನವರು ಮನವಿ ಮಾಡುತ್ತಾರೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಕ್ಷೇತ್ರದ ಶಾಸಕ ಕೃಷ್ಣನಾಯ್ಕ್ ಅವರು ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಪ್ರತಿನಿಧಿ ಜೊತೆ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಸಮುದಾಯದಲ್ಲಿ ವಲಸೆ ಪ್ರಮುಖ ಸಮಸ್ಯೆಯಾಗಿದೆ. "ಸಾಮಾನ್ಯವಾಗಿ ನಮ್ಮ ಸಮುದಾಯದಲ್ಲಿ, ಕೆಲವು ಜನರು ಕೃಷಿ ಭೂಮಿಯನ್ನು ಹೊಂದಿದ್ದಾರೆ.

## ಸ್ನೇಹಜೀವಿ ಕಲಾ ತಂಡದಿಂದ 'ನಮ್ಮ ನಡೆ ಪರಿಸರ ಜಾಗೃತಿ ಕಡೆ' ಪಾದಯಾತ್ರೆ

# ಪರಿಸರ ಉಳಿದರಷ್ಟೇ ಮನುಷ್ಯನಿಗೆ ಉಸಿರು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ




ಪರಿಸರವನ್ನು ಉಳಿಸದಿದ್ದರೆ ಮನುಷ್ಯನಿಗೆ ಉಸಿರು ಇಲ್ಲದಂತಾಗುತ್ತದೆ. ಮುಂದಿನ ದಿನಗಳಲ್ಲಿ ಜನರು ಪರಿಸರ ಕಾಪಾಡಿಕೊಳ್ಳದೆ ಹೋದಲ್ಲಿ ಕಠಿಣ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಗಿಡ ಮರಗಳನ್ನು ಕಡಿಯದಂತೆ ಎಚ್ಚರಿಕೆ ವಹಿಸಬೇಕಾಗಿದೆ ಎಂದು ಪರಿಸರ ಪ್ರೇಮಿ ಮುತ್ತಣ್ಣ ತಿರ್ಲಾಪೂರ ಹೇಳಿದರು.

ಸಮೀಪದ ಜಕ್ಕಲಿ ಗ್ರಾಮ ಚಾವಡಿ ಆವರಣದಲ್ಲಿ ಕಳಕಾಪೂರದ ಸ್ನೇಹಜೀವಿ ಕಲಾ ತಂಡದವರಿಂದ ನಡೆದ 'ನಮ್ಮ ನಡೆ ಪರಿಸರ ಜಾಗೃತಿ ಕಡೆ' ಎಂಬ ಪಾದಯಾತ್ರೆಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ತಾ.ಪಂ ಮಾಜಿ ಸದಸ್ಯ ಸಂದೇಶ ದೊಡ್ಡಮೇಟಿ ಮಾತನಾಡಿ, ಪ್ರತಿಯೊಬ್ಬರೂ ಸಸ್ಯಸಂಪತ್ತು, ಅರಣ್ಯೀಕರಣ ಬಗ್ಗೆ ಹೆಚ್ಚಿನ ಒತ್ತು ನೀಡುವುದಲ್ಲದೇ ಬದುಕಿನ ಒಂದು ಭಾಗವಾಗಿ ಸ್ವೀಕರಿಸಬೇಕಿದೆ ಎಂದರು.

ಪತ್ರಕರ್ತ ಸಂಗಮೇಶ ಮೆಣಸಿಗಿ ಮಾತನಾಡಿ, ಬಹುತೇಕರು ತಮ್ಮ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಲು ಮುಂದಾಗುತ್ತಾರೆ. ಆದರೆ ಮನುಕುಲವನ್ನು ಸಲಹುವ ಪರಿಸರದ ಬಗ್ಗೆ ಕಾಳಜಿ ವಹಿಸಿ ಪ್ರತಿಯೊಬ್ಬರೂ ಜನ್ಮದಿನದ ಸಮಯದಲ್ಲಿ ಒಂದು ಸಸಿಯನ್ನು ನೆಟ್ಟು ಪೋಷಣೆ ಮಾಡುವ ಜವಾಬ್ದಾರಿ ಹೊರಬೇಕಿದೆ ಎಂದರು.

ಕಾರ್ಯಕ್ರಮದ ಮೊದಲು ಕಳಕಾಪೂರದಿಂದ ಕಪ್ಪತಗುಡ್ಡದವರೆಗೆ ಪರಿಸರ ಸಂರಕ್ಷಣೆಗಾಗಿ ಪಾದಯಾತ್ರೆ ಹೊರಟ ತಂಡವನ್ನು ಗ್ರಾಮದ ಜನರು ಆತ್ಮೀಯವಾಗಿ ಸ್ವಾಗತಿಸಿದರು. ಗ್ರಾಮದ ಅನ್ನದಾನೇಶ್ವರ ಶ್ರೀಮಠದಿಂದ ಪ್ರಮುಖ ಬೀದಿಗಳ ಮೂಲಕ ಗ್ರಾಮ ಚಾವಡಿಯವರೆಗೆ ಡೊಳ್ಳು ಕುಣಿತದೊಂದಿಗೆ ಆಗಮಿಸಿದ ಕಲಾ ತಂಡದವರು ಪರಿಸರ ಸಂರಕ್ಷಣೆಯ ಘೋಷ ವಾಕ್ಯಗಳನ್ನು ಕೂಗುತ್ತ, ಭಾರತದ ಸಂವಿಧಾನದ ಪ್ರಕಾರ 51(ಎ)(ಜಿ) ಅರಣ್ಯ ಮತ್ತು ವನ್ಯಜೀವಿಗಳನ್ನು ಸಂರಕ್ಷಿಸುವುದು ಭಾರತದ ಪ್ರತಿಯೊಬ್ಬ ನಾಗರಿಕರ ಮೂಲಭೂತ ಕರ್ತವ್ಯವಾಗಿದೆ ಎನ್ನುವ ಅಂಶಗಳ ಸಂದೇಶಗಳನ್ನು ಸಾರುತ್ತ ಪರಿಸರ ಜಾಗೃತಿ ಮೂಡಿಸಿದರು.

ಬಳಿಕ ಗದುಗಿನ ಗಾನಯೋಗಿ ಪಂಡಿತ ಲಿಂ. ಡಾ. ಪುಟ್ಟರಾಜ ಗವಾಯಿಗಳ ಹಾಡಿಗೆ ನೃತ್ಯ ಅಭಿನಯಿಸಿದರು. ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಕುದುರಿ ಏರಿ ಸೂರ್ಯ ಬಂದಾನೋ ಎಂಬ ಹಾಡಿಗೆ ಕೋಲಾಟ ಹಾಕಿದರು. ಈ ವೇಳೆ ಕೂಡಿದ್ದ ಪ್ರೇಕ್ಷಕರು ಸಿಳ್ಳೆ, ಚಪ್ಪಾಳೆ ಹೊಡೆದು ತಂಡದವರನ್ನು ಪ್ರೋತ್ಸಾಹಿಸಿದರು. ಬಳಿಕ ವಿವಿಧ ಮನೋರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭದಲ್ಲಿ ಉಮೇಶ ಮೇಟಿ, ಶಿಕ್ಷಕ ಸಿ.ಕೆ ಕೇಸರಿ, ಪರುಶುರಾಮ ಜೋಗಿನ, ಈಶ್ವರಯ್ಯ ರೇಣುಕಮಠ, ವೀರಪ್ಪ ತಳವಾರ, ಅಂದಪ್ಪ ಮೇಟಿ, ಚನ್ನವೀರಪ್ಪ ಹುಬ್ಬಳ್ಳಿ, ಜಂಬಣ್ಣ ಕುರ್ತಕೋಟಿ, ಶರಣಯ್ಯ ಸರಗಣಾಚಾರ, ಬಸವರಾಜ ಎಂ, ಶ್ಯಾಶೆಟ್ಟಿ, ಗದಿಗೆಪ್ಪ ಮಾದರ ಸೇರಿದಂತೆ ಇನ್ನು ಅನೇಕರು ಇದ್ದರು.

ಒಟ್ಟು 22 ಜನ ತಂಡದ ಸದಸ್ಯರೊಂದಿಗೆ ಪಾದಯಾತ್ರೆಯುದ್ದಕ್ಕೂ ಸೈಕಲ್‌ನೊಂದಿಗೆ ಆಗಮಿಸಿದ್ದ ಮುತ್ತಣ್ಣ ತಿರ್ಲಾಪೂರ ಅವರು ಹಾಕಿಕೊಂಡಿದ್ದ ಹಸಿರು ಬಟ್ಟೆಯ ಮೇಲೆ ಪರಿಸರ ಜಾಗೃತಿಯ ನುಡಿಮುತ್ತುಗಳ ಘೋಷ ವಾಕ್ಯಗಳು, ಸೈಕಲ್‌ಗೆ ಅಳವಡಿಸಿದ್ದ ತ್ರಿವರ್ಣ ಧ್ವಜ ಎಲ್ಲರನ್ನೂ ಆಕರ್ಷಿಸಿತು. ತಂಡದ ನೇತೃತ್ವವನ್ನು ವಹಿಸಿದ್ದ ಶಿಕ್ಷಕ ಶರಣು ಹೆಬ್ಬಳ್ಳಿ ಸ್ವಾಗತಿಸಿ, ನಿರೂಪಿಸಿದರು.



## ಕರವೇ ಹೋರಾಟದ ಯಶಸ್ಸಿಗೆ ಉಪಪಾಸ, ದೀಡನಮಸ್ಕಾರ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಕ್ಷಣಾ ವೇದಿಕೆ ಬೆಟಗೇರಿ ನಗರ ಘಟಕದ ವತಿಯಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ಕರವೇ ಹಮ್ಮಿಕೊಂಡಿರುವ ಹೋರಾಟ ಯಶಸ್ವಿಯಾಗಲಿ ಎಂದು ನಗರದಲ್ಲಿ ಕರವೇಯಿಂದ ಉಪಪಾಸ ಮತ್ತು ದೀಡನಮಸ್ಕಾರ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರವೇ ಯುವ ಘಟಕದ ಜಿಲ್ಲಾ ಕಾರ್ಯದರ್ಶಿ ವಿನಾಯಕ ಬದಿ, ಕರವೇ ರಾಜ್ಯಾಧ್ಯಕ್ಷ ಟಿ.ಎ ನಾರಾಯಣಗೌಡರ ನೇತೃತ್ವದಲ್ಲಿ ಕಾವೇರಿ ನದಿ ನೀರು ವಿಚಾರವಾಗಿ ನಮ್ಮ ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು ಹಾಗೂ ಶಾಶ್ವತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ದೆಹಲಿಯ ಜಂತರ್ ಮಂತರನಲ್ಲಿ ಸಾವಿರಾರು ಕರವೇ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನೆ ಮಾಡಲಾಗುತ್ತಿದೆ. ಆದಷ್ಟು ಬೇಗ ಕಾವೇರಿ ಬಿಕ್ಕಟ್ಟು ಬಗೆಹರಿಸದಿದ್ದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಹೋರಾಟ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರವೇ ಬೆಟಗೇರಿ ಘಟಕದ ಅಧ್ಯಕ್ಷ ದಾವಲಸಾಬ ತಹಸೀಲ್ದಾರ, ಆಶಾ ಜೂಲಗುಡ್ಡ, ವಿನಾಯಕ ಬದಿ, ಶೋಭಾ ಕಲಾಲ, ವಿರುಪಾಕ್ಷ ಹಿತ್ತಲಮನಿ, ರತ್ನಮ್ಮ ಯಲಬುರ್ಗಿ, ಆಜೀಮ್ ಖಾಜಿ, ನಿಯಾಜ್‌ಶೇಖ, ಹುಸೇನ ಅಕ್ಕಿ, ತೌಸಿಫ ಢಾಲಾಯತ, ಸಲೀಂ ಶಿರವಾರ, ಗೌಸ ಶಿರಹಟ್ಟಿ, ಇಸಾಕ್ ನದಾಫ, ಇರ್ಫಾನ ತಾಳಿಕೋಟಿ, ಸಲೀಮ ಬೋದ್ಲೆಖಾನ, ಸಾದಿಕ್ ದೊಡ್ಡಮನಿ, ದಾವಲಸಾಬ ನದಾಫ, ಶಬ್ಬೀರ ಕೊಣ್ಣೂರ, ದ್ಯಾಮಣ್ಣ ಈಳಗೇರ, ಮೈಲಾರಪ್ಪ ಮಣ್ಣನವರ, ಮಾಬುಬಿ ಅಣ್ಣಿಗೇರಿ, ಅನಸೂಯಾ ಕಳಸಾಪೂರ, ಇಸ್ಮಾಯಿಲ್ ಕಿಲ್ಲೆದಾರ, ಮೌಲಾಸಾಬ ಸಂದಿಮನಿ, ಮಾಬುಸಿ ನದಾಫ, ಹೇಮಣ್ಣ ಹಡಗಲಿ, ಮಾಬುಸಾಬ ಬೆಟಗೇರಿ, ಆರ್ಘಾದ ನಾಗನೂರ, ಸಾದಿಕ್ ಟಕ್ಕೇದ, ಆಶಾಬಿ ಮುಜಾವರ ಮುಂತಾದ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

## ಯುವ ಘಟಕದ ಅಧ್ಯಕ್ಷರಾಗಿ ವಿಜಯ ಚಲವಾದಿ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ



ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಬೆಂಗಳೂರು ರಾಜ್ಯ ಸಮಿತಿಯ ಅಧ್ಯಕ್ಷರಾದ ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯರವರ ಅನುಮೋದನೆ ಮೇರೆಗೆ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷರಾಗಿ ನರಗುಂದದ ವಿಜಯ ಚಲವಾದಿರವರನ್ನು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಜಿಲ್ಲಾ ಅಧ್ಯಕ್ಷರಾದ ಎಲ್.ನಾರಾಯಣಸ್ವಾಮಿರವರು ನೇಮಕ ಮಾಡಿ ಆದೇಶಿಸಿದ್ದಾರೆ.

ಕೂಡಲೇ ಸಂಘದ ಚಟುವಟಿಕೆಯನ್ನು ಮಾಡಿ ಸಮಿತಿಗೆ ವರದಿ ಮಾಡಿಕೊಳ್ಳಲು ಕಾರ್ಯಾಧ್ಯಕ್ಷ ರವಿ ಕರಬಸಣ್ಣವರ ಹಾಗೂ ಪ್ರಧಾನ ಕಾರ್ಯದರ್ಶಿ ಬಸವರಾಜ ಈರಣ್ಣವರ ತಿಳಿಸಿದ್ದಾರೆ.

### ಕೇಂದ್ರ ನೌಕರರಿಗೆ ದೀಪಾವಳಿ ಉಡುಗೊರೆ ಶೇ.4ರಷ್ಟು ಡಿಎ ಹೆಚ್ಚಳ

## ರೈಲ್ವೆ ನೌಕರರಿಗೆ 78 ದಿನಗಳ ಬೋನಸ್ ಘೋಷಣೆ!

■ವಿಜಯಸಾಕ್ಷಿ ಸುದ್ದಿ, ನವದೆಹಲಿ

ದೀಪಾವಳಿಗೂ ಮುನ್ನ ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಮೋದಿ ಸರ್ಕಾರ ಭರ್ಜರಿ ಗಿಫ್ಟ್ ನೀಡಿದೆ. ಕೇಂದ್ರ ಸಚಿವ ಸಂಪುಟವು ನೌಕರರ ತುಟ್ಟಿಭತ್ಯೆ (ಡಿಎ) ಯಲ್ಲಿ ನಾಲ್ಕು ಪ್ರತಿಶತ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಭತ್ಯೆ ಹೆಚ್ಚಳದ ನಂತರ ನೌಕರರ ಡಿಎ ಶೇ 42ರಿಂದ 46ಕ್ಕೆ ಏರಿಕೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಹೆಚ್ಚಿದ ಡಿಎ ಜುಲೈ 1ರಿಂದ ಅನ್ವಯವಾಗಲಿದೆ. ಇದರಿಂದ ಒಂದು ಕೋಟಿಗೂ ಹೆಚ್ಚು ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಅನುಕೂಲವಾಗಲಿದೆ. ಕೇಂದ್ರ ಸರ್ಕಾರವು ತನ್ನ ಉದ್ಯೋಗಿಗಳ ಡಿಎಯನ್ನು ವರ್ಷಕ್ಕೆ ಎರಡು ಬಾರಿ ಬದಲಾಯಿಸುತ್ತದೆ. ಇದಕ್ಕೂ ಮುನ್ನ ಜನವರಿಯಿಂದ ಡಿಎಯನ್ನು ಶೇಕಡಾ ನಾಲ್ಕು ರಷ್ಟು ಹೆಚ್ಚಿಸಲಾಗಿತ್ತು. ಅಲ್ಲದೆ, ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಕಾರ್ಯಕ್ಷಮತೆ ಸಂಬಂಧಿತ ಬೋನಸ್ ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ 1,969 ಕೋಟಿ ರೂ. ಇದರಿಂದ 11 ಲಕ್ಷಕ್ಕೂ ಹೆಚ್ಚು ರೈಲ್ವೆ ನೌಕರರಿಗೆ ಅನುಕೂಲವಾಗಲಿದೆ.

ಏಳನೇ ವೇತನ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಕೇಂದ್ರ ನೌಕರರ ಡಿಎ ಹೆಚ್ಚಳ ಮಾಡಲಾಗಿದೆ. ಇದರಿಂದ 48.67 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 67.95 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯಲಿದ್ದಾರೆ. ಡಿಎ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 12,857 ಕೋಟಿ ಹೊರೆ ಬೀಳಲಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ನಂತರ ಸುದ್ದಿಗಾರರಿಗೆ ತಿಳಿಸಿದರು.

ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಮತ್ತು ಸಿಸಿಇಎ ಸಭೆಯಲ್ಲಿ ಇಂದು ನಾಲ್ಕು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ನೌಕರರ ಡಿಎ ಶೇ.42ರಿಂದ ಶೇ.46ಕ್ಕೆ ಏರಿಕೆಯಾಗಿದೆ. ಅಲ್ಲದೆ, 11 ಲಕ್ಷಕ್ಕೂ ಹೆಚ್ಚು ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಬೋನಸ್ ನೀಡಲು ನಿರ್ಧರಿಸಲಾಗಿದೆ. ಮೂರನೇ ನಿರ್ಧಾರ ರೈತರಿಗೆ ಸಂಬಂಧಿಸಿದ್ದು. ಆರು ಬೆಳೆಗಳ ಎಂಎಸ್‌ಪಿ ಹೆಚ್ಚಿಸಲಾಗಿದೆ. ಎಣ್ಣೆಕಾಳು ಮತ್ತು ಸಾಸಿವೆ ಬೆಲೆ 200 ರೂ., ಉದ್ದಿನಬೇಳೆ 425 ರೂ., ಗೋಧಿ 150 ರೂ., ಬಾರ್ಲಿ 115 ರೂ., ಬೇಳೆ 105 ರೂ., ಸೂರ್ಯಕಾಂತಿ ಕ್ವಿಂಟಲ್‌ಗೆ 150 ರೂಪಾಯಿ ಹೆಚ್ಚಿಸಲಾಗಿದೆ.

## ಬೆಂಗಳೂರು ಉಪನಗರ ರೈಲು ಯೋಜನೆಯ ಮಲ್ಲಿಗೆ ಮಾರ್ಗದ ಕಾಮಗಾರಿ ವೇಗಗೊಳಿಸಲು ಎಲ್&ಟಿಗೆ ಸೂಚನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಬೆಂಗಳೂರು ಉಪನಗರ ರೈಲು ಯೋಜನೆಯ ಬೆನ್ನಿಗಾನಹಳ್ಳಿಯಿಂದ ಚಿಕ್ಕಬಾಣಾವರದವರೆಗಿನ ಮಲ್ಲಿಗೆ ಮಾರ್ಗದ (ಕಾರಿಡಾರ್–2) ಕಾಮಗಾರಿಯನ್ನು ವೇಗಗೊಳಿಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್ ((ಕೆ–ರೈಡ್)) ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತಾ ಅವರು ಮಂಗಳವಾರ ಗುತ್ತಿಗೆದಾರ ಸಂಸ್ಥೆ ಲಾರ್ಸನ್ ಮತ್ತು ಟೂಬ್ರೊಗೆ ಸೂಚಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಯೋಜನೆಯನ್ನು ಪೂರ್ಣಗೊಳಿಸಲು 40 ತಿಂಗಳ ಗಡುವನ್ನು ನಿಗದಿಪಡಿಸಿದ್ದಾರೆ. ಈಗಾಗಲೇ, 12 ತಿಂಗಳುಗಳಿಗಿಂತ ಹೆಚ್ಚು ಕಾಲ ಕಳೆದುಹೋಗಿರುವ ಕಾರಣ, ಈ ಗಡುವನ್ನು ಪೂರೈಸಲು ನಿರ್ಮಾಣ ಚಟುವಟಿಕೆಗಳಿಗೆ ವೇಗ ನೀಡಲು ಸಂಸ್ಥೆ ಬಯಸಿದೆ ಎಂದು ಕೆ–ರೈಡ್ ಮೂಲಗಳು ತಿಳಿಸಿವೆ.

ಈ ನಿಟ್ಟಿನಲ್ಲಿ ಗುಪ್ತಾ ಅವರು ಎಲ್ & ಟಿ ಅಧಿಕಾರಿಗಳು ಮತ್ತು ಕೆ–ರೈಡ್ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ಯೋಜನೆಯು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುವುದನ್ನು ಖ ಚಿ ತ ್ ಪ ಡಿ ಸಿ ಕೆ ೊ ಳ್ಳ ಲ ು ವ ್ ಾ ನ ವ ್ ಶ ಕ್ತಿ ಂ ು ು ನ ್ ು ದ್ವಿಗುಣಗೊಳಿಸುವಂತೆ ಎಲ್&ಟಿ ಕಾರ್ಯನಿರ್ವಾಹಕರಿಗೆ ಗುಪ್ತಾ ಅವರು ಸೂಚಿಸಿದರು.

ಯೋಜನೆಗೆ ಎದುರಾಗಿರುವ ಅಡೆತಡೆಗಳನ್ನು ತೆರವುಗೊಳಿಸಲು, ವಿಶೇಷವಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಾಧಿಸಿರುವ ಪ್ರಗತಿ ಬಗ್ಗೆಯೂ ಅವರು ವಿಚಾರಿಸಿದರು ಎಂದು ಮೂಲಗಳು ತಿಳಿಸಿವೆ.

## ಬೆಂಗಳೂರಿನಲ್ಲಿ ಮತ್ತೊಂದು ಅಗ್ನಿ ಅವಘಡ: ಬಹುಮಹಡಿ ಕಟ್ಟಡದ ಪಬ್ ನಲ್ಲಿ ಬೆಂಕಿ, ಇಬ್ಬರಿಗೆ ಗಂಭೀರ ಗಾಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಇಂದು ಬುಧವಾರ ಅಗ್ನಿದುರಂತ ಸಂಭವಿಸಿದೆ. ಕೋರಮಂಗಲ ಸಮೀಪದ ತಾವರಕೆರೆ ಮುಖ್ಯರಸ್ತೆಯಲ್ಲಿರುವ ಪಬ್‌ವೊಂದರಲ್ಲಿ ಸಿಲಿಂಡರ್ ಸ್ಫೋಟದಿಂದ ಅಗ್ನಿ ದುರಂತ ಸಂಭವಿಸಿದ್ದು, ಕಟ್ಟಡದ ನಾಲ್ಕನೇ ಮಹಡಿ ಸಂಪೂರ್ಣ ಹೊತ್ತಿ ಉರಿದಿದೆ.

ಬೆಂಕಿಯಿಂದ ತಪ್ಪಿಸಿಕೊಳ್ಳಲು ವ್ಯಕ್ತಿಯೊಬ್ಬರು ಟೆರೇಸ್‌ನಿಂದ ಜಿಗಿದಿದ್ದಾರೆ. ಅವರು ಮತ್ತು ಮತ್ತೊಬ್ಬ ವ್ಯಕ್ತಿಗೆ ಗಂಭೀರ ಗಾಯಗಳಾಗಿವೆ. ಇಬ್ಬರೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾಲ್ಕು ಅಂತಸ್ತಿನ ಕಟ್ಟಡದ ಮೇಲಿನ ಮಹಡಿಯಲ್ಲಿ ಹಲವಾರು ಎಲ್‌ಪಿಜಿ ಸಿಲಿಂಡರ್‌ಗಳನ್ನು ಸಂಗ್ರಹಿಸಲಾಗಿದ್ದ 'ಹುಕ್ಕಾ ಬಾರ್ ಮತ್ತು ಕೆಫೆ'ಯಲ್ಲಿ ಮಧ್ಯಾಹ್ನದ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ.

ಸುತ್ತಮುತ್ತಲಿನ ಜನರು ಸ್ಫೋಟದಂತಹ ಶಬ್ದಗಳನ್ನು ಕೇಳಿದರು.

ನಾವು ಎಂಟು ಅಗ್ನಿಶಾಮಕ ಟೆಂಡರ್‌ಗಳನ್ನು ಸ್ಥಳಕ್ಕೆ ಕಳುಹಿಸಿದ್ದೇವೆ ಮತ್ತು ನಮ್ಮ ಹಿರಿಯ ಅಧಿಕಾರಿಗಳು ಘಟನಾ ಸ್ಥಳದಲ್ಲಿದ್ದಾರೆ. ಬೆಂಕಿಯನ್ನು ನಂದಿಸಲಾಗಿದೆ. ಇಬ್ಬರಿಗೆ ಗಂಭೀರ ಗಾಯಗಳಾಗಿವೆ ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ. ಕಟ್ಟಡದಿಂದ ಹೊಗೆ ಬರುತ್ತಿರುವುದನ್ನು ಗಮನಿಸಿದ ಜನರು ತಕ್ಷಣ ಎಚ್ಚರಿಕೆ ನೀಡಿ ಪೊಲೀಸರು ಮತ್ತು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಆ ಸಮಯದಲ್ಲಿ ಕೆಫೆಯಲ್ಲಿ ಗ್ರಾಹಕರು ಇರಲಿಲ್ಲ.

## ಬೆಂಗಳೂರು ನಗರದಲ್ಲಿ ಪಟಾಕಿ ನಿಷೇಧಕ್ಕೆ ಚಿಂತನೆ: ಗೃಹಸಚಿವ ಡಾ ಜಿ ಪರಮೇಶ್ವರ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಅತ್ತಿಬೆಲೆ ಪಟಾಕಿ ದುರಂತಕ್ಕೆ ನಾಲ್ಕೂ ಇಲಾಖೆಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಹೀಗಾಗಿ ಇರುವ ಕಾಯಿದೆಗಳಿಗೆ ಇನ್ನೂ ಹೆಚ್ಚಿನ ಶಕ್ತಿ ನೀಡಿ ಅಗ್ನಿ ದುರಂತ ಹಾಗೂ ಪಟಾಕಿ ಅವಘಡಗಳಿಗೆ ಅಂತ್ಯ ಹಾಡುವಲ್ಲಿ ಚಿಂತನೆ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಡಾ ಜಿ ಪರಮೇಶ್ವರ್ ಹೇಳಿದ್ದಾರೆ.

ಅತ್ತಿಬೆಲೆ ಪಟಾಕಿ ದುರಂತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು. ಪಟಾಕಿ ದುರಂತ ರಾಜ್ಯಕ್ಕೊಂದು ಪಾಠ, ಇದರಿಂದ 17 ಮಂದಿ ಈ ವರೆಗೆ ಸಾವಿಗೀಡಾಗಿದ್ದಾರೆ. ಅವರಿಗೆ ದೇವರು ಸದ್ಗತಿ ಒದಗಿಸಲಿ ಎಂದು ಸಂತಾಪ ಸೂಚಿಸಿದರು. ಹೆಚ್ಚುತ್ತಿರುವ ಪಟಾಕಿ ಹಾಗೂ ಅಗ್ನಿ ದುರಂತಗಳಿಗೆ ಕಡಿವಾಣ ಹಾಕಲು ರಾಜ್ಯಾದ್ಯಂತ ಅನ್ವಯಿಸುವಂತೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ ಕಾಯಿದೆಗಳಿಗೆ ಮಾರ್ಪಾಡು ಮಾಡಿ ಕಠಿಣ ಕ್ರಮಗಳಿಗಾಗಿ ಯೋಜಿಸಲಾಗುತ್ತಿದೆ ಎಂದರು.

ಬೆಂಗಳೂರಿನಲ್ಲಿ ಪಟಾಕಿ ನಿಷೇಧಕ್ಕೆ ಚಿಂತನೆ: ದೀಪಾವಳಿ ಸಮೀಪಿಸುತ್ತಿರುವುದರಿಂದ ಪಟಾಕಿ ನಿಷೇಧಕ್ಕೆ ಸಾಧಕ ಬಾಧಕ ಕುರಿತು ಯೋಚಿಸಲಾಗುತ್ತಿದೆ. ಮೊದಲ ಬಾರಿಗೆ ಬೆಂಗಳೂರಿನಲ್ಲಿ ಪಟಾಕಿ ನಿಷೇಧ ಪ್ರಾಯೋಗಿಕ ಜಾರಿಗೊಳಿಸಿ ಯಶಸ್ವಿಯಾದರೆ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು. ಈಗಾಗಲೇ ದೆಹಲಿಯಲ್ಲಿ ಪಟಾಕಿ ನಿಷೇಧಿಸಲಾಗಿದೆ. ಸರ್ಕಾರ ಆದೇಶಿಸಿರುವಂತೆ ಯಾವುದೇ ಪಕ್ಷದ ಕಾರ್ಯಕ್ರಮಗಳಿಗೆ ಪಟಾಕಿ ನಿಷೇಧಿಸಲಾಗಿದೆ. ಇನ್ನು ಹಬ್ಬಗಳ ಪಟಾಕಿ – ಸ್ಫೋಟಕ ಅಗ್ನಿ ದುರಂತಗಳಿಂದ ಅಮಾಯಕ ಜೀವಗಳು ಬಲಿಯಾಗುತ್ತಿವೆ ಇಂತಹ ದುರಂತಗಳು ಮತ್ತೆ ಮರುಕಳಿಸಬಾರದು ಎಂದು ಸೂಚಿಸಿದರು.

ಅತ್ತಿಬೆಲೆ ದುರಂತ ನಾಲ್ಕು ಇಲಾಖೆಗಳು ಹೊಣೆ ಅತ್ತಿಬೆಲೆ ದುರಂತಕ್ಕೆ ಕಂದಾಯ, ಪೊಲೀಸ್, ಅಗ್ನಿ ಶಾಮಕವಷ್ಟೇ ಅಲ್ಲದೇ ರಸ್ತೆ ಸಂಚಾರ ಚೆಕ್ ಪೋಸ್ಟ್ ಗಳು ಕಾರಣವಾಗಿವೆ. ಯಾವುದೇ ಸ್ಫೋಟಕಗಳನ್ನು ಸಾಗಣೆ ಮಾಡುವ ಸಂದರ್ಭದಲ್ಲಿ ಎಲ್‌ಎ7 ನಿಯಮ ಪಾಲಿಸಿ ಪರವಾನಗಿ ಅನುಮತಿ ಪಡೆದಿರಬೇಕು. ಆದರೆ, ತಮಿಳುನಾಡಿಂದ ಬಂದ ಸಾಗಣೆ ವಾಹನ ಎಲ್‌ಎ5 ಪರವಾನಗಿ ಮಾತ್ರ ಹೊಂದಿದ್ದು, ಇದು ಸಹ ದುರಂತಕ್ಕೆ ಕಾರಣವಾಗಿದೆ.

# ಬರಗಾಲ ನಿರ್ವಹಣೆಯಲ್ಲಿ ಸರ್ಕಾರ ವಿಫಲ

▶▶ಮೊದಲನೇ ಪುಟದಿಂದ

ಇದೀಗ ರಾಜ್ಯ ಸರಕಾರ 5 ಕೆಜಿ ನೀಡುತ್ತಿದೆ. 5 ಕೆಜಿ ಅಕ್ಕಿಗೆ ಬದಲಾಗಿ ಹಣವನ್ನು ನೀಡುವುದಾಗಿ ಹೇಳಿ, ಕಳೆದ 4 ತಿಂಗಳುಗಳಿಂದ ಹಣ ಜಮಾ ಮಾಡಿಲ್ಲ. ಹೊಸದಾಗಿ ಬಿಪಿಎಲ್ ಕಾರ್ಡ್ ಮಾಡಿಸಲು ತಾಂತ್ರಿಕ ತೊಂದರೆಗಳಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಉಚಿತ ಯೋಜನೆಗಳಿಗೆ ಸಮರ್ಪಕ ವ್ಯವಸ್ಥೆಯನ್ನು ಕಲ್ಪಿಸಿಲ್ಲ ಎಂದು ಆರೋಪಿಸಿದರು.

ಶರಣು ಅಂಗಡಿ, ಅಶೋಕ ಪಲ್ಲೇದ, ಫಕ್ಕೀರೇಶ ರಟ್ಟಿಹಳ್ಳಿ, ಬಿ.ಡಿ ಪಲ್ಲೇದ, ನಾಗರಾಜ ಲಕ್ಕುಂಡಿ, ಗೂಳಪ್ಪ ಕರಿಗಾರ, ತಿಪ್ಪಣ್ಣ ಕೊಂಚಿಗೇರಿ, ಶಂಕರ ಮರಾಠೆ, ರಾಮಣ್ಣ ಕಂಬಳಿ, ಗಂಗಾಧರ ಮೆಣಸಿನಕಾಯಿ, ಸಂದೇಶ ಗಾಣಿಗೇರ, ಜಗದೀಶ ತೇಲಿ, ಯಲ್ಲಪ್ಪ ಇಂಗಳಗಿ, ಮಲ್ಲು ಕಬಾಡಿ, ಅಕ್ಬರಸಾಬ ಯಾದಗಿರಿ ಮುಂತಾದವರು ಉಪಸ್ಥಿತರಿದ್ದರು.

# ತೆಂಗಿನ ಸಸಿ ಪಡೆಯಲು ರೈತರಿಂದ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೆಂಗು ಪ್ರದೇಶ ವಿಸ್ತರಣೆಯಲ್ಲಿ ತೆಂಗು ತೋಟ ನಿರ್ಮಾಣ ಮಾಡಲು ಇಚ್ಛಿಸುವ ರೈತರಿಗೆ ಉತ್ತಮ ಗುಣಮಟ್ಟದ ಸಸಿಗಳನ್ನು ವಿತರಿಸಲಾಗುವುದು.

ಕಲ್ಪವೃಕ್ಷ ಎಂದು ಕರೆಯಲ್ಪಡುವ ತೆಂಗು ಒಂದು ಪ್ರಮುಖವಾದ ವಾಣಿಜ್ಯ ಬೆಳೆಯಾಗಿದೆ. ಬಹು ಉಪಯೋಗಿ ಬೆಳೆಯಾದ ತೆಂಗು ಕೃಷಿಯಿಂದ ಉತ್ತಮ ಲಾಭಗಳಿಸಬಹುದು. ಆಹಾರ ಪಾನೀಯ, ಉರುವಲು, ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳು ಇತ್ಯಾದಿ, ಹಲವಾರು ತೆಂಗು ಉತ್ಪನ್ನಗಳನ್ನು ಉಪಯೋಗಿಸಲಾಗುವುದು.

ತೆಂಗಿನ ಮರದ ಎಲ್ಲಾ ಭಾಗಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬಳಸಲಾಗುವುದರಿಂದ ಇದರ ಮೌಲ್ಯ ದಿನೇ ದಿನೇ ಹೆಚ್ಚಾಗುತ್ತಿದೆ. ಅರ್ಜಿ ಸಲ್ಲಿಸುವವರು ಸಾಲಿನಿಂದ ಸಾಲಿಗೆ 9 ಮೀ (30 ಅಡಿ), ಗಿಡದಿಂದ ಗಿಡಕ್ಕೆ 9 ಮೀ (30 ಅಡಿ) ಅಂತರದಲ್ಲಿ 3 ಅಡಿ ಉದ್ದ, 3 ಅಡಿ ಅಗಲ ಮತ್ತು 3 ಅಡಿ ಆಳದಲ್ಲಿ ಗುಂಡಿ ತೊಡಿಕೊಂಡು ನಂತರ ಮೇಲ್ಮಣ್ಣು, ಕೊಟ್ಟಿಗೆ ಗೊಬ್ಬರ, ಉಸುಕು, ಬೇವಿನ ಹಿಂಡಿ ಗೊಬ್ಬರ ಮಿಶ್ರಣ ತುಂಬಿ ಸಸಿಯನ್ನು ನಾಟಿ ಮಾಡಬೇಕು. ರೈತರು ಅಗತ್ಯ ದಾಖಲೆಗಳಾದ ಪೋಟೋ, ಉತಾರ, ನೀರಿನ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಅಕ್ಟೋಬರ್ 26 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿರವರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.23ರಿಂದ ವೀರರಾಣಿ ಕಿತ್ತೂರು ಚೆನ್ನಮ್ಮ ವಿಜಯೋತ್ಸವ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯದ ಬೆಳ್ಳಿ ಚುಕ್ಕೆಯೆನಿಸಿರುವ ವೀರರಾಣಿ ಕಿತ್ತೂರು ಚೆನ್ನಮ್ಮಾಜಿಯವರ ವಿಜಯೋತ್ಸವವನ್ನು ಪ್ರತಿ ಬಾರಿಯಂತೆ ಈ ಬಾರಿಯೂ ಕೂಡ ಅಕ್ಟೋಬರ್ 23 ರಿಂದ 25 ರವರೆಗೆ ಕಿತ್ತೂರಿನಲ್ಲಿ ನಡೆಸಲು ಬೆಳಗಾವಿ ಜಿಲ್ಲಾ ಆಡಳಿತ ವ್ಯವಸ್ಥೆ ಮಾಡಿದ್ದು, ಇದರ ಅಂಗವಾಗಿ ಪುರುಷ ಮತ್ತು ಮಹಿಳೆಯರ ಕಬಡ್ಡಿ ವಾಲಿಬಾಲ್, ಸೈಕ್ಲಿಂಗ್ ಹಾಗೂ ಮ್ಯಾರಥಾನ್ ಸ್ಪರ್ಧೆಗಳನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ.

ಮ್ಯಾರಥಾನ್ ಸ್ಪರ್ಧೆಗಳನ್ನು ಅಕ್ಟೋಬರ್ 24 ರಂದು ಬೆಳಿಗ್ಗೆ 6.30 ಗಂಟಗೆ ಕಿತ್ತೂರಿನ ಚೆನ್ನಮ್ಮ ವೃತ್ತದಿಂದ ಪ್ರಾರಂಭಿಸಲಾಗುವುದು. ಕಬಡ್ಡಿ ಮತ್ತು ವಾಲಿಬಾಲ್ ಸ್ಪರ್ಧೆಗಳನ್ನು ಅಕ್ಟೋಬರ್ 24 ರಂದು ಬೆಳಿಗ್ಗೆ 10 ಗಂಟೆಗೆ ಕಲ್ಮಠ ಶಾಲಾ ಮೈದಾನ ಕಿತ್ತೂರಿನಲ್ಲಿ ಪ್ರಾರಂಭಿಸಲಾಗುವುದು. ಸೈಕ್ಲಿಂಗ್ ಸ್ಪರ್ಧೆಗಳನ್ನು ಅಕ್ಟೋಬರ್ 25 ರಂದು ಬೆಳಿಗ್ಗೆ 6.30 ಗಂಟೆಗೆ ಕಿತ್ತೂರಿನ ಚೆನ್ನಮ್ಮ ವೃತ್ತದಿಂದ ಪ್ರಾರಂಭಿಸಲಾಗುವುದು. ವಿಜೇತರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

ಆಸಕ್ತ ಕ್ರಿಡಾಪಟುಗಳು ತಮ್ಮ ಹೆಸರುಗಳನ್ನು ಅಕ್ಟೋಬರ್ 20 ರೊಳಗಾಗಿ ಉಪನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ ಇವರಲ್ಲಿ ನೊಂದಾಯಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ ಇವರ ಕಚೇರಿ ದೂರವಾಣಿ ಸಂಖ್ಯೆ 0831–2950306 ನ್ನು ಸಂಪರ್ಕಿಸಬಹುದಾಗಿದೆ.

## ಮುಂಡರಗಿಯಲ್ಲಿ ಔಡಲ ಸಂಕಿರಣ ತಳಿಯ ಕ್ಷೇತ್ರೋತ್ಸವ, ಬೆಳೆ ಪ್ರಾತ್ಯಕ್ಷಿಕೆ

# ಒಣ ಬೇಸಾಯದಲ್ಲಿ ಲಾಭದಾಯಕ ಔಡಲ ಬೆಳೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಅಖಿಲ ಭಾರತ ಸುಸಂಘಟಿತ ಹರಳು (ಔಡಲ) ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ ಬೆಂಗಳೂರು, ಭಾರತೀಯ ಕೃಷಿ ಅನುಸಂಧಾನ ಪರಿಷತ್–ಭಾರತೀಯ ಎಣ್ಣೆಕಾಳು ಸಂಶೋಧನಾ ಸಂಸ್ಥೆ ಹೈದರಾಬಾದ್, ತೆಲಂಗಾಣ ಮತ್ತು ಐಸಿಎಆರ್–ಕೆ.ಎಚ್ ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ ಸಂಯಕ್ತ ಆಶ್ರಯದಲ್ಲಿ ಔಡಲ ಸಂಕಿರಣ ತಳಿಯ ಕ್ಷೇತ್ರೋತ್ಸವವನ್ನು ಮುಂಡರಗಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.



ಭಾರತೀಯ ಎಣ್ಣೆಕಾಳು ಸಂಶೋಧನಾ ಸಂಸ್ಥೆಯ ವತಿಯಿಂದ ಔಡಲ ಬೆಳೆಯಲ್ಲಿ ವಿವಿಧ ತಳಿಗಳಾದ ಐಸಿಎಚ್–5 ಮತ್ತು ಐಸಿಎಚ್–66 ಸಂಕರಣ ತಳಿಗಳನ್ನು ಮುಂಡರಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸುಮಾರು 10 ಜನ ರೈತರ ಹೊಲದಲ್ಲಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು. ಇದರ ಅಂಗವಾಗಿ ಬಾಲಚಂದ್ರ ಆರೇರ ಇವರ ಹೊಲದಲ್ಲಿ ಔಡಲ ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.

ಕ್ಷೇತ್ರೋತ್ಸವದ ಉದ್ಘಾಟನೆಯನ್ನು ಭಾರತೀಯ ಎಣ್ಣೆಕಾಳು ಸಂಶೋಧನಾ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ. ಸಿ.ಲಾವಣ್ಯ ನೆರವೇರಿಸಿ ಮಾತನಾಡಿ, ಔಡಲ ಬೇಸಾಯ ಉತ್ತಮ ಲಾಭದಾಯಕ ಬೆಳೆಯಾಗಿದ್ದು, ಈ ಬೆಳೆ ನಮ್ಮ ದೇಶಕ್ಕೆ ಹೊಸದಲ್ಲ. ಔಡಲ ಬೆಳೆಯಲ್ಲಿ ಸುಧಾರಿತ ಸಂಕಿರಣ ತಳಿಗಳನ್ನು ಅಭಿವೃದ್ಧಿಪಡಿಸಿದ್ದು ಅದರ ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು.

ವಿಜ್ಞಾನಿ ಡಾ. ಜಿ.ಡಿ ಸತೀಶ ಮಾತನಾಡಿ, ಸುಧಾರಿತ ಬೀಜಗಳು, ಉತ್ಪಾದನಾ ತಾಂತ್ರಿಕತೆಗಳು, ಜೈವಿಕ ಗೊಬ್ಬರ ಹಾಗೂ ಜೈವಿಕ ಕೀಟನಾಶಕಗಳ ಬಳಕೆಯಿಂದ ಕೃಷಿಯಲ್ಲಿ ಖರ್ಚನ್ನು ಕಡಿಮೆ ಮಾಡಬಹುದು. ಜೊತೆಗೆ ರೈತ ಉತ್ಪಾದಕ ಸಂಘಗಳನ್ನು ಮಾಡಿ ಮೌಲ್ಯವರ್ಧನೆ ಕೈಗೊಳ್ಳಿರಿ ಎಂದು ತಿಳಿಸಿದರು.

ಗದಗ ರೈತ ಸಂಶೋಧನಾ ಕೇಂದ್ರದ ವಿಜ್ಞಾನಿ ಎಸ್.ಎಲ್ ಪಾಟೀಲ ಮಾತನಾಡಿ ತಮ್ಮ ಸಂಸ್ಥೆ ಎಲ್ಲ ರೀತಿಯ ಔಡಲ ಬೆಳಯಲು ಮಾರ್ಗದರ್ಶನ ಮಾಡುವುದು ಎಂದು ತಿಳಿಸಿದರು. ವಿಜ್ಞಾನಿಗಳಾದ ಮೊಟಗಿ, ಪ್ರಗತಿಪರ ರೈತ ಚಂದ್ರಹಾಸ ಉಳ್ಳಾಗಡ್ಡಿ, ಈಶ್ವರಪ್ಪ ಹಂಚಿನಾಳ, ರಾಮಣ್ಣ ಇಲ್ಲೂರ, ಮಾತನಾಡಿದರು.

ಐ.ಸಿ.ಎ.ಆರ್–ಕೆವಿಕೆ ಹುಲಕೋಟಿ ಮುಖ್ಯಸ್ಥೆ ಡಾ.ಸುಧಾ ಮಂಕಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಔಡಲ ಬೇಸಾಯ ಮಾಡಿದ ಬಾಲಚಂದ್ರ ಆರೇರರನ್ನು ಸನ್ಮಾನಿಸಲಾಯಿತು. ಔಡಲ ಬೇಸಾಯ ಹಾಗೂ ಪ್ರಾತ್ಯಕ್ಷಿಕೆ ಕುರಿತು ತಳಿ ವಿಜ್ಞಾನಿ ಡಾ.ಯಮನೂರು ಮಾತನಾಡಿದರು. ವಿಜ್ಞಾನಿ ಡಾ. ಆರ್.ಮೋಹನ್ ಕುಮಾರ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಹೇಮಾವತಿ ಆರ್.ಎಚ್ ವಂದಿಸಿದರು. ಈ ಸಂಧರ್ಭದಲ್ಲಿ ರೈತರಿಗೆ ಔಡಲ ಬೆಳೆಯ ತಾಕುಗಳಿಗೆ ಕ್ಷೇತ್ರ ಭೆಟ್ಟಿಯನ್ನು ಏರ್ಪಡಿಸಲಾಯಿತು.

# ಎಂ.ಎಚ್ ಸವದತ್ತಿಯವರಿಗೆ ಪ್ರಧಾನಿಗಳಿಂದ ಅಭಿನಂದನಾ ಪತ್ರ

■ವಿಜಯಸಾಕ್ಷಿ ಸುದ್ದಿ, ಗದಗ

ಆನ್‌ಲೈನ್ ಮೂಲಕ ನಡೆಸಿದ 'ಪರೀಕ್ಷಾ ಪೇ ಚರ್ಚಾ' ಸ್ಪರ್ಧೆಯಲ್ಲಿ ಮಕ್ಕಳು ಪರೀಕ್ಷೆಗೆ ಹೇಗೆ ತಯಾರಾಗಬೇಕು ಎಂಬ ವಿಷಯದ ಕುರಿತು ಜಿಲ್ಲೆಯ ಮುಂಡರಗಿ ತಾಲೂಕಿನ ಏಕಲಾಸಪುರದ ಶಿಕ್ಷಕ ಎಂ.ಎಚ್ ಸವದತ್ತಿ ಮಂಡಿಸಿದ ಪ್ರಬಂಧವನ್ನು ಮೆಚ್ಚಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿನಂದನಾ ಪತ್ರ ರವಾನಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ಒತ್ತಡ ಮುಕ್ತ ವಾತಾವರಣವನ್ನು ಸೃಷ್ಟಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ 'ಪರೀಕ್ಷಾ ಯೋಧರು' ಎಂಬ ಬೃಹತ್ ಆಂದೋಲನದ ಭಾಗವಾಗಿ, ಪರೀಕ್ಷೆ ಎದುರಿಸುವ ಮಕ್ಕಳು ಮಾನಸಿಕವಾಗಿ ಹೇಗೆ ಸಿದ್ಧರಾಗಬೇಕು, ತಂದೆ–ತಾಯಿ, ಗುರುಗಳ ಮಾರ್ಗದರ್ಶನದಲ್ಲಿ ಸದಾ ಕಾಲ ಅನ್ವಯಿಕ ಅಭ್ಯಾಸಶೀಲರಾಗಿರಬೇಕು, ಹೊಸ ತಂತ್ರಜ್ಞಾನದ ಬಳಕೆ, ಶಿಕ್ಷಕರ ನಾವೀನ್ಯತೆಯ ಬೋಧನಾ ವಿಧಾನಗಳ ಕುರಿತು ಪ್ರಬಂಧದಲ್ಲಿ ಮಂಡಿಸಿದ್ದರು.



ಇಂದು ಬದಲಾಗುತ್ತಿರುವ ಕಾಲದೊಂದಿಗೆ, ಕ್ರೀಡೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಸ್ಟಾರ್ಟ್–ಅಪ್‌ಗಳು ಸೇರಿದಂತೆ ಅನೇಕ ಹೊಸ ಅವಕಾಶಗಳು ಯುವಜನರಿಗೆ ಲಭ್ಯವಿವೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಸಾಮರ್ಥ್ಯಗಳನ್ನು ಉತ್ತಮವಾಗಿ ಬಳಸಿಕೊಳ್ಳುವ ಮೂಲಕ ತನಗಾಗಿ ಮತ್ತು ದೇಶಕ್ಕಾಗಿ ಕನಸು ಕಾಣಲು ಮತ್ತು ಅದನ್ನು ನನಸಾಗಿಸಲು ಪ್ರೇರೇಪಿಸುವಲ್ಲಿ ಶಿಕ್ಷಕರ ಅಮೂಲ್ಯವಾದ ಮಾರ್ಗದರ್ಶನವು ನಿರ್ಣಾಯಕವಾಗಿದೆ. ನಮ್ಮ ಯುವಜನರು ಮುಂದಿನ 25 ವರ್ಷಗಳಲ್ಲಿ ರಾಷ್ಟ್ರದ ಪ್ರಗತಿಯೊಂದಿಗೆ ತಮ್ಮ ಗುರಿಗಳನ್ನು ಜೋಡಿಸುವ ಮೂಲಕ ದೇಶ ಮತ್ತು ಸಮಾಜಕ್ಕಾಗಿ ತುಂಬು ಹೃದಯದಿಂದ ಕೆಲಸ ಮಾಡುತ್ತಾರೆ.

'ನಿಮ್ಮ ಆಲೋಚನೆಗಳನ್ನು ಹಂಚಿಕೊಂಡಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು, ನಿಮ್ಮ ಉತ್ತಮ ಸಲಹೆ, ಉಜ್ವಲ ಭವಿಷ್ಯಕ್ಕಾಗಿ ಶುಭ ಹಾರೈಕೆಗಳು' ಎಂದು ಪ್ರಧಾನಿ ಮೋದಿ ಅವರು ತಮ್ಮ ಪ್ರಶಂಸನಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

# ಪೀರಸಾಬ ಕೌತಾಳರಿಗೆ ರಾಜ್ಯ ನಿಗಮ ಮಂಡಳಿ ಸ್ಥಾನ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವಲ್ಲಿ ಅಲ್ಪಸಂಖ್ಯಾತ ಸಮುದಾಯದ ಪಾತ್ರ ಬಹು ಮುಖ್ಯವಾಗಿದೆ ಎಂಬುದನ್ನು ರಾಜ್ಯ ಸರಕಾರ ಪರಿಗಣಿಸಿ, ಗದಗ–ಬೆಟಗೇರಿ ನಗರಸಭೆಯ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಕಟ್ಟಾಳು ಪೀರಸಾಬ ಕೌತಾಳ ಅವರಿಗೆ ರಾಜ್ಯ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡುವ ಮೂಲಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ಒದಗಿಸಬೇಕಿದೆ ಎಂದು ಅಲ್ಪಸಂಖ್ಯಾತ ಸಮುದಾಯದ ಯುವ ನಾಯಕ ಕರೀಂಸಾಬ ಸುಣಗಾರ ಒತ್ತಾಯಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಮಾಜಿ ಶಾಸಕರಾದ ಡಿ.ಆರ್ ಪಾಟೀಲ್ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ್ ಅವರ ಆಪ್ತ ಶಿಷ್ಯರಾದ ಪೀರಸಾಬ ಕೌತಾಳ ಅವರು ಈಗಾಗಲೇ 3 ಬಾರಿ ನಗರಸಭಾ ಸದಸ್ಯರಾಗಿ, ನಗರಾಧ್ಯಕ್ಷರಾಗಿ ಉತ್ತಮ ಜನಪರ ಆಡಳಿತವನ್ನು ನೀಡಿದ್ದಾರೆ. ಸಮುದಾಯ ಸಂಘಟನೆಯಲ್ಲಿ ಕಾರ್ಯೋನ್ಮುಖರಾಗಿದ್ದಾರೆ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಡಾ.ಎಚ್.ಕೆ ಪಾಟೀಲರ ಗೆಲುವಿಗೆ ಪೀರಸಾಬ ಕೌತಾಳ ಅವರ ಪಾತ್ರ ಪ್ರಮುಖವಾಗಿದೆ.

ಕಳೆದ ಆಡಳಿತ ಅವಧಿಯಲ್ಲಿ ರೋಣ, ನರಗುಂದ, ಲಕ್ಷ್ಮೇಶ್ವರ, ಮುಂಡರಗಿ ತಾಲೂಕಿನ ನಾಯಕರಿಗೆ ನಿಗಮ ಮಂಡಳಿ ಸ್ಥಾನಮಾನ ದೊರೆತಿದೆ. ಈ ಬಾರಿ ಪೀರಸಾಬ ಕೌತಾಳ ಅವರಿಗೆ ರಾಜ್ಯ ನಿಗಮ ಮಂಡಳಿಯ ಅಧ್ಯಕ್ಷರಾಗಿ ನೇಮಿಸುವ ಮೂಲಕ ಗದಗ ತಾಲೂಕಿಗೆ ನ್ಯಾಯ ಕೊಡಬೇಕೆಂದು ಅವರು ಮನವಿ ಮಾಡಿದ್ದಾರೆ.

# ಪಾರದರ್ಶಕತೆಗಾಗಿ ಸಾಮಾಜಿಕ ಪರಿಶೋಧನೆ ಪ್ರಕ್ರಿಯೆ



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಾದ್ಯಂತ 2023–24ನೇ ಸಾಲಿನಲ್ಲಿ ಮಹಾತ್ಮಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ 15ನೇ ಹಣಕಾಸು ಯೋಜನೆಯಡಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಕಂಡುಕೊಳ್ಳುವ ಸಲುವಾಗಿ ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ ನಡೆಸಲು ಜಿಲ್ಲಾ ಪಂಚಾಯತಿಯಿಂದ ವೇಳಾಪಟ್ಟಿ ನಿಗದಿಪಡಿಸಿ ಆದೇಶ ಹೊರಡಿಸಿದ್ದು, ಮುಂದಿನ 4 ತಿಂಗಳುಗಳ ಕಾಲ ನಡೆಯುವ ಪ್ರಕ್ರಿಯೆಗೆ ಸಾಂಕೇತಿಕವಾಗಿ ಪ್ರತಿ ತಾಲೂಕಿನ ಒಂದು ಪಂಚಾಯತಿಯಲ್ಲಿ ಚಾಲನೆ ನೀಡಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 7 ತಾಲೂಕುಗಳಿಂದ 122 ಗ್ರಾಮಪಂಚಾಯತಿಗಳಿದ್ದು, 01–04–2022 ರಿಂದ 31–03–2023ರ ಅವಧಿಯಲ್ಲಿ ನರೇಗಾ ಹಾಗೂ 15ನೇ ಹಣಕಾಸು ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 4 ರಿಂದ 6 ದಿನಗಳ ಕಾಲ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಗ್ರಾಮ ಸಂಪನ್ಮೂಲ ವ್ಯಕ್ತಿಗಳ ಮೂಲಕ ಸಾರ್ವಜನಿಕ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡಲಾದ ಎಲ್ಲಾ ಕಾಮಗಾರಿಗಳ ಸ್ಥಳ ಪರಿಶೀಲನೆ, ಫಲಾನುಭವಿಗಳ ಮನೆ ಭೇಟಿ ಹಾಗೂ ಕಡತಗಳ ಪರಿಶೀಲನೆ ಮಾಡಿ ಗ್ರಾಮ ಸಭೆಗೆ ಮಂಡಿಸುವ ಪ್ರಕ್ರಿಯೆ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಜರುಗುತ್ತಿದೆ. ಸಂಬಂಧಿತ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪಂಚಾಯತ್ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಬಿಸಿಯೂಟ ನಿರ್ವಹಣೆ ಮೊದಲಿನಂತೆಯೇ ಇರಲಿ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದಲ್ಲಿ ಬಿಸಿಯೂಟದ ಜಂಟಿ ಖಾತೆಯನ್ನು ಮೊದಲಿನಂತೆ ಮುಖ್ಯ ಶಿಕ್ಷಕರು ಮತ್ತು ಮುಖ್ಯ ಅಡುಗೆಯವರ ಹೆಸರಿನಲ್ಲಿ ನಿರ್ವಹಿಸಲು ಒತ್ತಾಯಿಸಿ, ತಾಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ ಸರಕಾರಿ ಪ್ರಾಥಮಿಕ ಮತ್ತು ಫ್ರೌಢ ಶಾಲೆಗಳ ಮುಖ್ಯ ಶಿಕ್ಷಕರ ಸಂಘದ ವತಿಯಿಂದ ಬಿಸಿಯೂಟ ಅಧಿಕಾರಿಗಳಿಗೆ ಬುಧವಾರ ಮನವಿ ಸಲ್ಲಿಸಲಾಯಿತು.

ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ವಿಶ್ವನಾಥ, ಬಿಸಿಯೂಟ ಸಹಾಯಕ ಅಧಿಕಾರಿ ರಂಜಿತಾ ತಳಗೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣಿಗೇರಿ ಅವರಿಗೆ ಮನವಿ ಸಲ್ಲಿಸಿ, ಬಿಸಿಯೂಟ ಖಾತೆ ನಿರ್ವಹಣೆಯ ಜವಾಬ್ದಾರಿಯನ್ನು ಎಸ್‌ಡಿಎಂಸಿ ಅಧ್ಯಕ್ಷರಿಗೆ ವರ್ಗವಣೆ ಮಾಡಿದವುದರಿಂದ ಮುಖ್ಯ ಶಿಕ್ಷಕರಿಗೆ ಸಾಕಷ್ಟು ಸಮಸ್ಯೆಗಳಾಗಲಿವೆ. ರಾಜ್ಯದ ಎಲ್ಲಾ ಮುಖ್ಯ ಶಿಕ್ಷಕರ ಮತ್ತು ಬಿಸಿಯೂಟದ ಮುಖ್ಯ ಅಡುಗೆಯವರ ಅಭಿಪ್ರಾಯದಂತೆ ಈ ಮೊದಲಿನಂತೆ ನಿರ್ವಹಿಸಲು ಆದೇಶ ಹೊರಡಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ ಸಜ್ಜನರ, ಪ್ರಧಾನ ಕಾರ್ಯದರ್ಶಿ ಎಚ್. ಜೆ ಪವಾರ, ಮನೋಹರ ಎಸ್, ಮಹಾಂತೇಶ ಕೊನೇರಿ, ಎಮ್.ಪಿ ಶೀರನಹಳ್ಳಿ, ಎ.ಡಿ ಬಂಡಿ, ಆರ್.ಸಿ ಪಟ್ಟೇದ, ಬಸವರಾಜ ಸಜ್ಜನರ, ರವಿ ನಾಯಕ, ಹೆಚ್.ಜೆ ಪವಾರ್, ದಾಸರ ಮನೋಹರ್, ಎಸ್.ಸಿ ಹರ್ತಿ, ಎಸ್.ಡಿ ಬಸೇಗೌಡ್ರ, ವಿ.ಆರ್ ಕುರಡಗಿ, ಎಫ್.ಎಂ ಮಾನಶೆಟ್ಟಿ, ಪಿ.ಆರ್ ಮುನವಳ್ಳಿ, ಶಿವಪುತ್ರಪ್ಪ ಇಟಗಿ, ಬಿ.ವಿ ಹೂಗಾರ, ವಿ.ಬಿ ಗದಗ್, ರವಿ ಕನ್ನಳ್ಳಿ, ಬಿ.ಎಮ್ ಹಡಪದ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಪದಾಧಿಕಾರಿಗಳು ಮತ್ತು ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

## ರಾಷ್ಟ್ರಮಟ್ಟದ 'ಚಿಣ್ಣರ ಚಿತ್ರ ಚಿತ್ತಾರ ಚಿತ್ರಕಲೋತ್ಸವ' ಜಿಲ್ಲಾ ಸಂಯೋಜಕರ ಕಾರ್ಯಾಗಾರ

# ಸಂಘಟಿತ ಪ್ರಯತ್ನದೊಂದಿಗೆ ಯಶಸ್ಸು ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಆಲೋಚನೆಗಳು ನಮ್ಮಲ್ಲಿನ ಕ್ರಿಯಾಶೀಲತೆಯನ್ನು ಹೆಚ್ಚಿಸುತ್ತವೆ. ಈ ಹಿನ್ನೆಲೆಯಲ್ಲಿ ವಿಭಿನ್ನ ಮತ್ತು ವಿಶಿಷ್ಟ ಆಲೋಚನೆಯಿಂದ ಚಿತ್ರಕಲೆಯನ್ನು ಉಳಿಸಬೇಕು, ಬೆಳೆಸಬೇಕು ಎನ್ನುವ ಕಾರ್ಯದಲ್ಲಿ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂದು ಬಣ್ಣದ ಮನೆಯ ವಿಜಯ ಕಿರೇಸೂರ ಹೇಳಿದರು.

ಅವರು ನಗರದ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯ ಆರ್ಟ್ ಅಡ್ಡಾದಲ್ಲಿ ನಡೆದ 2023–24ನೇ ಸಾಲಿನ ರಾಷ್ಟ್ರಮಟ್ಟದ ಚಿಣ್ಣರ ಚಿತ್ರ ಚಿತ್ತಾರ ಚಿತ್ರಕಲೋತ್ಸವ ಹಿನ್ನೆಲೆಯಲ್ಲಿ ಜಿಲ್ಲಾ ಸಂಯೋಜಕರಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.




ಗದಗ ಜಿಲ್ಲೆ ಕಲೆ, ಸಾಹಿತ್ಯ, ಸಾಂಸ್ಕೃತಿಕವಾಗಿ ಬಹಳಷ್ಟು ಕೊಡುಗೆಯನ್ನು ನೀಡಿದೆ. ಇಂತಹ ನೆಲದಲ್ಲಿ ಕಲಾತ್ಮಕವಾಗಿ ಇಂದಿಷ್ಟು ಸೇವೆ ಸಲ್ಲಿಸುವ ಉದ್ದೇಶದಿಂದ ಕಳೆದ 18 ವರ್ಷಗಳಿಂದ ಬಣ್ಣದ ಮನೆ ಸಾಂಸ್ಕೃತಿ ವೇದಿಕೆ ಸಾಕಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಕಳೆದ ವರ್ಷದಿಂದ ಚಿಣ್ಣರ ಚಿತ್ರ ಚಿತ್ತಾರ ಕಾರ್ಯಕ್ರಮದ ಮೂಲಕ ನಾಡಿನ ಮಕ್ಕಳಿಗೆ ಚಿತ್ರಕಲೆಯ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ಕೆ ಅಣಿಯಾಗಿದ್ದು, ರಾಜ್ಯದ 40 ಸಾವಿರ ಮಕ್ಕಳು ಈ ಚಿತ್ರಕಲೋತ್ಸವದಲ್ಲಿ ಭಾಗವಹಿಸಿದ್ದರು.

ಈ ಬಾರಿ ರಾಷ್ಟ್ರಮಟ್ಟದಲ್ಲಿ ಚಿತ್ರಕಲೋತ್ಸವ ಆಯೋಜಿಸಿದ್ದು, ಲಕ್ಷಾಂತರ ಮಕ್ಕಳು ಭಾಗವಹಿಸುವ ನಿರೀಕ್ಷೆ ಇದೆ. ಭಾಗವಹಿಸಿದ ಪ್ರತಿ ಮಗುವಿಗೂ ಪ್ರಮಾಣಪತ್ರ ಮತ್ತು ನೆನೆಪಿನ ಕಾಣಿಕೆ ನೀಡಿ, ಆ ಮಗುವಿನಲ್ಲಿ ಚಿತ್ರಕಲೆಯ ಬಗ್ಗೆ ಇನ್ನಷ್ಟು ಆಸಕ್ತಿ ಮೂಡಿಸುವುದು ನಮ್ಮ ಉದ್ದೇಶ.

ಭಾಗವಹಿಸಿದ್ದರಲ್ಲಿ ಉತ್ತಮ 300 ವಿದ್ಯಾರ್ಥಿಗಳಿಗೆ ಪ್ರಸಿದ್ಧ ಚಿತ್ರ ಕಲಾವಿದರ ಹೆಸರಲ್ಲಿ ಲಿಟಲ್ ಆರ್ಟಿಸ್ಟ್ ಅವಾರ್ಡ್ ನೀಡಲಾಗುವುದು. ಈ ನಿಟ್ಟಿನಲ್ಲಿ ಜಿಲ್ಲಾ ಸಂಯೋಜಕರು ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಬೇಕು ಎಂದರು.

ಒಂದು ಸಂಸ್ಥೆ ಒಬ್ಬ ವ್ಯಕ್ತಿಯಿಂದ ಮಾತ್ರ ಬೆಳವಣಿಗೆ ಹೊಂದಲು ಸಾಧ್ಯವಿಲ್ಲ. ಬದಲಾಗಿ, ಸಂಘಟಿತ ಪ್ರಯತ್ನದೊಂದಿಗೆ ಆಸಕ್ತರ ತಂಡ ಕೈಜೋಡಿಸಿದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ಹೀಗಾಗಿ ಪ್ರತಿ ಜಿಲ್ಲೆಯಲ್ಲಿಯೂ ಚಿಣ್ಣರ ಚಿತ್ರ ಚಿತ್ತಾರ ರಾಷ್ಟ್ರಮಟ್ಟದ ಚಿತ್ರಕಲೋತ್ಸವ ಕುರಿತು ಪ್ರತಿ ಶಾಲೆಯ ಮಗುವಿಗೆ ಇದರ ಮಾಹಿತಿ ತಲುಪುವಂತೆ ಮಾಡುವಲ್ಲಿ ಜಿಲ್ಲಾ ಸಂಯೋಜಕರ ಪಾತ್ರ ಮಹತ್ವದ್ದಾಗಿದೆ. ತಾಲೂಕು ಸಂಯೋಜಕರ ಮೂಲಕ ಈ ಚಿತ್ರಕಲೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಮಾಡಬೇಕು ಎಂದರು.

ಜನವರಿ ತಿಂಗಳಲ್ಲಿ ಗದಗ ನಗರದಲ್ಲಿ ನಡೆಯುವ ಚಿತ್ರಕಲೋತ್ಸವದ ಬೃಹತ್ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಣೆ ಮಾಡಲಾಗುವುದು. ಆಯಾ ಶಾಲಾ ಹಂತದಲ್ಲಿ ಸ್ಪರ್ಧೆಗಳನ್ನು ಆಯೋಜಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾಗಿದೆ. ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸದ ಉದ್ದೇಶದಿಂದ ಬಹುತೇಕ ಶಿಕ್ಷಕರು ಸ್ವಯಂ ಪ್ರೇರಿತರಾಗಿ ಸ್ಪರ್ಧೆ ಆಯೋಜಿಸಲು ಆಸಕ್ತಿ ತೋರಿದ್ದು, ಶಿಕ್ಷರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ತಲುಪಿಸುವಲ್ಲಿ ಶ್ರಮಿಸಬೇಕು ಎಂದು ವಿಜಯ ಕಿರೇಸೂರ ಹೇಳಿದರು.

ಚಿತ್ರಕಲಾವಿದ ದ್ವಾರಕೀಶರೆಡ್ಡಿ 'ಚಿಣ್ಣರ ಚಿತ್ರ ಚಿತ್ತಾರ' ಎಂಬ ಅಕ್ಷರ ಬರವಣಿಗೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಜಿಲ್ಲಾಧ್ಯಕ್ಷ ಶಾಂತಕುಮಾರ ಭಜಂತ್ರಿ, ನೀಲು ರಾಠೋಡ, ಬಸವರಾಜ್ ಹಾಲಿನವರ್, ರಾಜು ಬೇಡಗೌಡ್ರ, ಮೆಹಬೂಬ ನದಾಫ, ಶಿವಕುಮಾರ ಮರೆಕರ, ನಯನಾ ಕುಶ್ನಿ, ಅಮೀರಖಾನ್ ಓಲೇಕಾರ್, ಮಾರೂತಿ ಪತ್ತಾರ, ಮಂಜುನಾಥ ಹೂಗಾರ, ತೈಶೀಮ್ ಹರಪನಹಳ್ಳಿ, ಮನೋಜಕುಮಾರ್ ಭಜಂತ್ರಿ, ಮಾಧೂರಿ ಪೂಜಾರ, ಅನಿಲ್ ಸವದಿ, ರಾಘವೇಂದ್ರ ಆಚಾರಿ, ಪವಿತ್ರಾ ಕುಂದಾಪುರ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಯ ಚಿಣ್ಣರ ಚಿತ್ರ ಚಿತ್ತಾರ ರಾಷ್ಟ್ರಮಟ್ಟದ ಚಿತ್ರಕಲೋತ್ಸವದ ಜಿಲ್ಲಾ ಸಂಯೋಜಕರು ಇದ್ದರು.

# ದಮನಕಾರಕ ನೀತಿ ಖಂಡನೀಯ

■ವಿಜಯಸಾಕ್ಷಿ ಸುದ್ದಿ, ಗದಗ

ಗಾಝಾದ ಆಸ್ಪತ್ರೆಯ ಮೇಲೆ ಇಸ್ರೇಲ್ ಸೇನೆ ನಡೆಸಿದ ಬಾಂಬ್ ದಾಳಿ ಅಮಾನವೀಯವಾದುದು ಎಂದು ವೆಲ್ಫೇರ್ ಪಾರ್ಟಿ ರಾಜ್ಯ ಅಧ್ಯಕ್ಷ, ನ್ಯಾಯವಾದಿ ತಾಹೇರ ಹುಸೇನ್ ತೀವ್ರವಾಗಿ ಖಂಡಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ಈ ದುಷ್ಕೃತ್ಯದ ವಿರುದ್ಧ ವಿಶ್ವದ ರಾಷ್ಟ್ರಗಳೇಕೆ ರಂಗಕ್ಕಿಳಿಯುತ್ತಿಲ್ಲ? ಇಸ್ರೇಲ್ ಸಹಿ ಹಾಕಿದ ಜಿನೀವ ಒಪ್ಪಂದದ ಅನುಸಾರವಾಗಿ 15 ವರ್ಷಗಳ ಒಳಗಿರುವ, ಆಸ್ಪತ್ರೆಯ ಸೌಲಭ್ಯ ವಂಚಿತ, ಆಹಾರ–ಉಡುಪು ಇಲ್ಲದೆ ಪರದಾಡುವ ಮಕ್ಕಳಿಗೆ ವಿಶೇಷ ಸಂರಕ್ಷಣೆ ನೀಡಬೇಕು.

ಇದರ ಪಾಲನೆಯಾಗದೆ ಮಕ್ಕಳ, ಮಹಿಳೆಯರ ನರಮೇಧ ನಿರಂತರ ನಡೆಯುತ್ತಿದೆ. ಈ ದೌರ್ಜನ್ಯ, ದಮನಕಾರಕ ನೀತಿಯನ್ನು ವಿಶ್ವದ ಎಲ್ಲಾ ರಾಷ್ಟ್ರಗಳು ಖಂಡಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಯಂದು ಅವರು ಅಗ್ರಹಿಸಿದ್ದಾರೆ.



ಗದುಗಿನಲ್ಲಿ ನಡೆದ ಪ್ರಾಥಮಿಕ ಶಾಲೆಗಳ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಲಕ್ಷ್ಮೇಶ್ವರ ತಾಲೂಕಿನ ಶಿಗ್ಲಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ಅಂಕಿತಕುಮಾರ ಸರದಾರ ಉದ್ದ ಜಿಗಿತ, ಎತ್ತರ ಜಿಗಿತದಲ್ಲಿ ಪ್ರಥಮ, ಅಮಿತಕುಮಾರ ಸರದಾರ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಮುಖ್ಯೋಪಾಧ್ಯಾಯರು, ಶಿಕ್ಷಕರು, ಎಸ್‌ಡಿಎಂಸಿ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಬಸವರಾಜರಿಗೆ ಪ್ರಧಾನಿಗಳಿಂದ ಅಭಿನಂದನಾ ಪತ್ರ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಆನ್‌ಲೈನ್ ಮೂಲಕ ನಡೆಸಿದ 'ಪರೀಕ್ಷಾ ಪೇ ಚರ್ಚಾ' ಸ್ಪರ್ಧೆಯಲ್ಲಿ ಮಕ್ಕಳು ಪರೀಕ್ಷೆಗೆ ಹೇಗೆ ತಯಾರಾಗಬೇಕು ಎಂಬ ವಿಷಯದ ಕುರಿತು ತಾಲೂಕಿನ ಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿಆರ್‌ಪಿ)ಶಿಕ್ಷಕ ಬಸವರಾಜ ಯರಗುಪ್ಪಿ ಮಂಡಿಸಿದ ಪ್ರಬಂಧ ಮೆಚ್ಚಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿನಂದನಾ ಪತ್ರ ಕಳುಹಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ಒತ್ತಡ ಮುಕ್ತ ವಾತಾವರಣವನ್ನು ಸೃಷ್ಟಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಪರೀಕ್ಷಾ ಯೋಧರು (ಎಕ್ಸಾಮ್ ವಾರಿಯರ್ಸ್) ಎಂಬ ಬೃಹತ್ ಆಂದೋಲನದ ಭಾಗವಾಗಿ, ಮೊದಲು ಪರೀಕ್ಷೆ ಎದುರಿಸುವ ಮಕ್ಕಳು ಮಾನಸಿಕವಾಗಿ ಪೂರ್ವ ಸಿದ್ಧರಾಗಬೇಕು, ತಂದೆ ತಾಯಿ ಗುರುಗಳ ಮಾರ್ಗದರ್ಶನದಲ್ಲಿ ಸದಾ ಕಾಲ ಅನ್ವಯಿಕ ಅಭ್ಯಾಸಶೀಲರಾಗಿರಬೇಕು, ಹೊಸ ತಂತ್ರಜ್ಞಾನದ ಬಳಕೆ, ಶಿಕ್ಷಕರ ನಾವೀನ್ಯತೆಯ ಬೋಧನಾ ವಿಧಾನಗಳ ಕುರಿತು ಪ್ರಬಂಧದಲ್ಲಿ ಮಂಡಿಸಿದ್ದರು.

ಇಂದು ಬದಲಾಗುತ್ತಿರುವ ಕಾಲದೊಂದಿಗೆ, ಕ್ರೀಡೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಸ್ಟಾರ್ಟ್-ಅಪ್‌ಗಳು ಸೇರಿದಂತೆ ಅನೇಕ ಹೊಸ ಅವಕಾಶಗಳು ಯುವಜನರಿಗೆ ಲಭ್ಯವಿವೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಸಾಮರ್ಥ್ಯಗಳನ್ನು ಉತ್ತಮವಾಗಿ ಬಳಸಿಕೊಳ್ಳುವ ಮೂಲಕ ತನಗಾಗಿ ಮತ್ತು ದೇಶಕ್ಕಾಗಿ ಕನಸು ಕಾಣಲು ಮತ್ತು ಅದನ್ನು ನನಸಾಗಿಸಲು ಪ್ರೇರೇಪಿಸುವಲ್ಲಿ ಶಿಕ್ಷಕರ ಅಮೂಲ್ಯವಾದ ಮಾರ್ಗದರ್ಶನವು ನಿರ್ಣಾಯಕವಾಗಿದೆ. ನಮ್ಮ ಯುವಜನರು ಮುಂದಿನ 25 ವರ್ಷಗಳಲ್ಲಿ ರಾಷ್ಟ್ರದ ಪ್ರಗತಿಯೊಂದಿಗೆ ತಮ್ಮ ಗುರಿಗಳನ್ನು ಜೋಡಿಸುವ ಮೂಲಕ ದೇಶ ಮತ್ತು ಸಮಾಜಕ್ಕಾಗಿ ತುಂಬು ಹೃದಯದಿಂದ ಕೆಲಸ ಮಾಡುತ್ತಾರೆ ಎಂದು ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಿದ್ದರು.

'ನಿಮ್ಮ ಆಲೋಚನೆಗಳನ್ನು ಹಂಚಿಕೊಂಡಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು, ನಿಮ್ಮ ಉತ್ತಮ ಸಲಹೆ, ಉಜ್ವಲ ಭವಿಷ್ಯಕ್ಕಾಗಿ ಶುಭ ಹಾರೈಕೆಗಳು' ಎಂದು ಪ್ರಧಾನಿ ಮೋದಿ ಅವರು ತಮ್ಮ ಪ್ರಶಂಸನಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಸಮರ್ಥ ಉತ್ತರ ಕರ್ನಾಟಕ ಫುಡ್ಸ್ ಮೂಲಕ ಸ್ವಾವಲಂಬನೆ ಸಾಧಿಸಿದ ಯುವಕರು

# ದುಡಿವ ಕೈಗಳಿಗೆ ಆಧಾರವಾದ 'ಸಮರ್ಥ'



ಇಲ್ಲಿ ಸಜ್ಜೆ, ರಾಗಿ, ಬಿಳಿ ಜೋಳದ ರೊಟ್ಟಿಗಳು ಸಹ ತಯಾರಾಗುತ್ತಿದ್ದು, ಇದರೊಂದಿಗೆ ರುಚಿ-ಶುಚಿಯಾದ ಚಟ್ನಿ ಪುಡಿಗಳನ್ನೂ ತಯಾರಿಸುತ್ತಾ, ಮಹಿಳಾ ಉದ್ಯೋಗಿಗಳಿಗೆ ಆಸರೆಯಾಗಿದೆ. ಶ್ರಮ ವಹಿಸಿ ಕಾಯಕ ಮಾಡಿದಲ್ಲಿ ಪ್ರತಿಫಲ ಕಟ್ಟಿಟ್ಟ ಬುತ್ತಿ.

**– ಮಾಹಾಂತೇಶ ನಪೂರಿಮಠ.**
ಸಂಸ್ಥೆಯ ಮ್ಯಾನೇಜರ್.

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಉತ್ತರ ಕರ್ನಾಟಕ ಜನರ ಮುಖ್ಯ ಆಹಾರ ರೊಟ್ಟಿ. ರೊಟ್ಟಿ ತಿಂದವನ ರಟ್ಟೆ ಬಲು ಗಟ್ಟಿ, ರೊಟ್ಟಿ ತಿಂದವನ ಜಟ್ಟಿ, ಜೋಳ ತಿಂದು ತೋಳನಂತಾದ ಎಂಬ ನಾಣ್ಣುಡಿಗಳಲ್ಲಿ ಮಹತ್ವ ಅಡಗಿದೆ. ರಾಜ್ಯಾದ್ಯಂತ ಜೋಳದ ರೊಟ್ಟಿ ತನ್ನದೇ ಆದ ಛಾಪು ಮೂಡಿಸಿದ್ದು, ಇಲ್ಲಿನ ಯುವಕರು ಸೇರಿ ಸಮರ್ಥ ಉತ್ತರ ಕರ್ನಾಟಕ (ಯುಕೆ)ಫುಡ್ಸ್ ಖಡಕ್ ರೊಟ್ಟಿ ಕೇಂದ್ರವನ್ನು ಕಳೆದ ನಾಲ್ಕು ವರ್ಷಗಳ ಹಿಂದೆ ಪ್ರಾರಂಭಿಸಿದ್ದಾರೆ. ಹತ್ತಾರು ಮಹಿಳಾ ಉದ್ಯೋಗಿಗಳಿಗೆ ಆಸರೆಯಾಗಿ, ರಾಜ್ಯಾದ್ಯಂತ ರೊಟ್ಟಿ ಮಾರಾಟ ಮಾಡುವ ಮೂಲಕ ಸ್ವ-ಉದ್ಯೋಗ ಕೈಗೊಳ್ಳಲು ನಗರವೇ ಆಗಬೇಕೆಂದಿಲ್ಲ ಎಂಬುದಕ್ಕೆ ಉದಾಹರಣೆಯಾಗಿದ್ದಾರೆ.

ಹಳ್ಳಿಯ ಯುವಕರು ಉದ್ಯೋಗ ಅರಸಿ ಪಟ್ಟಣಕ್ಕೆ ತೆರಳುವುದು ವಾಡಿಕೆ. ಹಳ್ಳಿಯಲ್ಲೇ ಉದ್ಯೋಗ ಸೃಷ್ಟಿ ಮಾಡಲು ಕಂಕಣಬದ್ಧರಾಗಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಉದ್ಯೋಗ ಎಲ್ಲಿಯಾದರೂ ಮಾಡಬಹುದು ಎನ್ನುವುದದಕ್ಕೆ ಇವರು ಉದಾಹರಣೆಯಾಗಿ ನಿಲ್ಲುತ್ತಾರೆ. ಇಲ್ಲಿ ನಿತ್ಯ 10ರಿಂದ 15 ಮಹಿಳೆಯರು ರೊಟ್ಟಿಯನ್ನು ಬೇಯಿಸುತ್ತಾರೆ. ದಿನಕ್ಕೆ ಸರಿ ಸುಮಾರು 3 ಸಾವಿರ ರೊಟ್ಟಿಗಳನ್ನು ತಯಾರಿಸಿ ಬೆಂಗಳೂರು ಸೇರಿದಂತೆ ಹಲವಾರು ಪಟ್ಟಣಗಳಿಗೆ ನಿತ್ಯ ಸರಬರಾಜು ಮಾಡುವ ಮೂಲಕ ಯುವಕರು ಆರ್ಥಿಕವಾಗಿ ಸಬಲರಾಗಿದ್ದಾರೆ.

ಈ ಯುವಕರು ಪದವೀಧರರಾಗಿದ್ದು, ತಮ್ಮ ತಮ್ಮ ಉದ್ಯೋಗದ ಜೊತೆಯಲ್ಲಿಯೇ ಉದ್ಯಮವನ್ನೂ ನೋಡಿಕೊಳ್ಳುವ ಮೂಲಕ ಯುವಕರಿಗೆ ಮಾದರಿಯಾಗಿದ್ದಾರಲ್ಲದೆ, ಸ್ವ ಉದ್ಯೋಗ ಕೈಗೊಳ್ಳಲು ಇತರರಿಗೂ ಪ್ರೇರಣೆಯಾಗಿದ್ದಾರೆ. ಇಲ್ಲಿ ಆಧುನಿಕ ಯಂತ್ರಗಳ ಮೂಲಕ ರೊಟ್ಟಿ ತಯಾರಾಗುತ್ತದೆ. ಹಾಗಿದ್ದರೂ, ಮನೆಯಲ್ಲಿ ಮಾಡುವ ಸಾಂಪ್ರದಾಯಿಕ ರೊಟ್ಟಿಯಂತೆ-ಯೇ ಬೇಯಿಸುವುದರಿಂದ ಈ ಸಂಸ್ಥೆಯ ರೊಟ್ಟಿಗೆ ಎಲ್ಲಿಲ್ಲದ ಬೇಡಿಕೆಯಿದೆ. ಸ್ಥಳೀಯವಾಗಿ ಸಾಕಷ್ಟು ದಾಭಾ ಮತ್ತು ಲಿಂಗಾಯತ ಖಾನಾವಳಿಗಳಿಗೆ ನಿತ್ಯ ಸಾವಿರಾರು ರೊಟ್ಟಿಗಳನ್ನು ಪೂರೈಸುತ್ತ ಉದ್ಯಮವನ್ನೂ ಬೆಳೆಸಿ, ಆಸಕ್ತ ಮಹಿಳೆಯರಿಗೆ ಉದ್ಯೋಗದಾತರೂ ಆಗಿದ್ದಾರೆ.



ನಮ್ಮ ಯುವಕರ ಬಳಗ ಎಲ್ಲರಿಗೂ ಉತ್ತಮ ಆಹಾರ ದೊರೆಯಲಿ, ಜನರ ಆರೋಗ್ಯಕ್ಕೆ ಸಹಕಾರಿಯಾಗಲಿ ಎಂಬ ಉದ್ದೇಶದಿಂದ ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ, ಈಗ ಹತ್ತಾರು ಜನರಿಗೆ ಉದ್ಯೋಗ ನೀಡುವ ಮೂಲಕ ಸಮರ್ಥ ರೊಟ್ಟಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎನ್ನುತ್ತಾರೆ ಇಲ್ಲಿನ ಉದ್ಯೋಗಿ ನೀಲಕಂಠಪ್ಪ ಗವಿಮಠ.

ಕಳೆದ 5 ವರ್ಷಗಳಿಂದ ಇಲ್ಲಿನ 15 ಕುಟುಂಬಕ್ಕೆ ಈ ರೊಟ್ಟಿ ಕೇಂದ್ರ ಸಹಕಾರಿಯಾಗಿದೆ. ನಿತ್ಯ ಕೈ ತುಂಬಾ ಕೆಲಸ ನೀಡಿ, ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿದ್ದಾರೆ ಎನ್ನುತ್ತಾರೆ ಸಕ್ಕುಬಾಯಿ ಹಾಗೂ ರಾಜೇಶ್ವರಿ.

# ಅನ್ನಪೂರ್ಣೇಶ್ವರಿ ಮಂದಿರದಲ್ಲಿ ಉಡಿ ತುಂಬುವ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಅಡವೀಂದ್ರ ಸ್ವಾಮಿ ಮಠದಲ್ಲಿ 43ನೇ ವರ್ಷದ ಶ್ರೀದೇವಿ ಪುರಾಣ ಪ್ರವಚನ, 9ನೇ ವರ್ಷದ ಶ್ರೀ ಅನ್ನಪೂರ್ಣೇಶ್ವರಿ ದೇವಿ ಮಹಾರಥೋತ್ಸವ ಹಾಗೂ ದಸರಾ ಮಹೋತ್ಸವದ ಅಂಗವಾಗಿ ಜಾತ್ರಾ ಮಹೋತ್ಸವದ ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಮೀಳಾದೇವಿ ಬಳಿಗಾರ, ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ಬೆಳ್ಳಿಕೊಪ್ಪ, ಸಹಕಾರ್ಯದರ್ಶಿ ವಿಜಯಲಕ್ಷ್ಮೀ ಹೊಸಳ್ಳಿಮಠ, ಕೋಶಾಧ್ಯಕ್ಷೆ ಸುವರ್ಣಾ ಮದರಿಮಠ ಅವರ ನೇತೃತ್ವದಲ್ಲಿ ಮಂಗಳವಾರ ಶ್ರೀದೇವಿಗೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಿತು.

ಶಾಂತಕ್ಕ ಹಿರೇವಡೆಯರ, ಶಾರದಾ ಬೊಮ್ಮಸಾಗರ, ಲೀಲಾಬಾವತಿ ಬಿಳೇಯಲಿ, ಸುರೇಖಾ ಪಿಳ್ಳಿ, ಶಾಂತಾಬಾಯಿ ಬಾಕಳೆ, ಜಯಶ್ರೀ ಹಿರೇಮಠ, ಸಂಧ್ಯಾ ಕೋಟಿ, ಸುಲೋಚನಾ ಐಹೊಳ್ಳಿ, ಶಿವಲೀಲಾ ಅಕ್ಕಿ, ಲಲಿತಾ ಹಿರೇಮಠ, ಗೌರಾದೇವಿ ಶಾಬಾದಿಮಠ, ಶಿವಲೀಲಾ ಕುರಡಗಿ, ಸುಶೀಲಾ ಕೋಟಿ, ಯಶೋದಾ ಗಿಡ್ನಂದಿ, ಕಸ್ತೂರಿಬಾಯಿ ಭಾಂಡಗೆ, ಗಿರಿಜಾದೇವಿ ನಾಲತ್ವಾಡಮಠ, ಶಾಂತಾ ಸಂಕನೂರ, ಪ್ರೇಮಾ ಗ್ವಾರಿ, ಜಯಶ್ರೀ ಉಗಲಾಟದ, ಅಕ್ಕಮಹಾದೇವಿ ಬಳಿಗಾರ, ಗೀತಾ ಹೂಗಾರ ಅವರು ಉಡಿ ತುಂಬುವ ಕಾರ್ಯಕ್ಕೆ ಕೈಜೋಡಿಸಿದರು.

ಅ.20ರಂದು ಶುಕ್ರವಾರ ಸಂಜೆ 6.30ಕ್ಕೆ ಶ್ರೀ ದೇವಿಗೆ ಹಾಗೂ ಮುತ್ತೈದೆಯರಿಗೆ ಅರಿಷಿಣ-ಕುಂಕುಮ, ಬಳೆ ಸೇವೆ ಕಾರ್ಯಕ್ರಮ ಜರುಗಲಿದೆ. ನಂತರ ನಡೆಯುವ ಸಮಾರಂಭದ ಸಾನ್ನಿಧ್ಯವನ್ನು ರೋಣ ಗುಲಗಂಜಿಮಠದ ಪೂಜ್ಯ ಗುರುಪಾದ ದೇವರು ವಹಿಸುವರು. ಗಣ್ಯ ವರ್ತಕ ಚಂದ್ರು ಬಾಳಿಹಳ್ಳಿಮಠ, ಎಚ್.ಕೆ ಮುಲ್ಲಾ, ನಿವೃತ್ತ ತಹಸೀಲ್ದಾರ ಎಲ್.ಎಸ್ ನೀಲಗುಂದ ಅವರಿಗೆ ಗೌರವ ಪ್ರಶಸ್ತಿ ಪ್ರದಾನವಿದೆ ಎಂದು ಪ್ರಕಟಣೆ ತಿಳಿಸಿದೆ.

## ನಕಲಿ ಸಹಿ ಮಾಡಿ ಸರ್ಕಾರದ ಹಣ ದುರುಪಯೋಗ ಆರೋಪ

# ಕಾನೂನು ಕ್ರಮಕ್ಕೆ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಹರಿಪೂರ ಗ್ರಾಮದ ಇಡಗುಂಜಿ ಮಹಾಗಣಪತಿ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಅವರ ಸಹಚರರು ಕೆಲವು ಸದಸ್ಯರ ಸಹಿ ಇಲ್ಲದೇ ತಾವೇ ನಕಲಿ ಸಹಿ ಮಾಡಿ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ, ಸರಕಾರದ ಹಣ ದುರುಪಯೋಗಪಡಿಸಿಕೊಂಡಿದ್ದು, ಇಂತವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಬುಧವಾರ ದೇವಸ್ಥಾನದ ಎದುರುಗಡೆ ಪ್ರಕಟಣೆ ನೀಡುವ ಮೂಲಕ ನಿವಾಸಿ ವೀರೇಶ ಬಣಗಾರ, ಮಹೇಶ ದಾನಪ್ಪಗೌಡರ ಆಗ್ರಹ ವ್ಯಕ್ತಪಡಿಸಿದರು.

ಇತ್ತೀಚೆಗೆ ಶಿರಹಟ್ಟಿ ತಾ.ಪಂ ಸಭಾಭವನದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಜನತಾದರ್ಶನ ಕಾರ್ಯಕ್ರಮದಲ್ಲಿ ಈ ಬಗ್ಗೆ ಬಣಗಾರ ಅವರು ಅರ್ಜಿಯನ್ನು ಸಲ್ಲಿಸಿದ್ದಾರೆ. ಇತ್ತೀಚೆಗೆ ಧಾರ್ಮಿಕ ಇಲಾಖೆಯಿಂದ ದೇವಸ್ಥಾನದ ಜೀರ್ಣೋದ್ಧಾರಕ್ಕೆಂದು 10 ಲಕ್ಷ ರೂ ಅನುದಾನ ಮಂಜೂರಾಗಿದ್ದು,



ಅರ್ಧ ಹಣ ಈಗಾಗಲೇ ಟ್ರಸ್ಟ್ ಖಾತೆಗೆ ಹಣ ಜಮಾ ಆಗಿದೆ. ಇಲ್ಲಿಯವರೆಗೂ ಯಾವುದೇ ಕೆಲಸ ಕೈಗೊಳ್ಳದೇ ಸರ್ಕಾರದ ಹಣವನ್ನು ದುರುಪಯೋಗ 'ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಮಹೇಶ ದಾನಪ್ಪಗೌಡರ ಮಾತನಾಡಿ, ಧಾರ್ಮಿಕ ದತ್ತಿ ಇಲಾಖೆಯಿಂದ ಅನುದಾನ ಪಡೆಯಲು ನನ್ನ ಸಹಿಯನ್ನು ಪೋರ್ಜರಿ ಮಾಡಿದ್ದಾರೆ.

ಈ ಬಗ್ಗೆ ಕಳೆದ ವರ್ಷ ಜುಲೈ 18ರಂದೇ ಶಿರಹಟ್ಟಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮವಾಗಿಲ್ಲ ಎಂದರು. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಇದನ್ನು ಗಂಭೀರವಾಗಿ ತೆಗೆದುಕೊಳ್ಳದಿರುವದರಿಂದ ಅಧಿಕಾರಿಗಳ ಕುರಿತೂ ಸಾರ್ವಜನಿಕರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ತಹಸೀಲ್ದಾರ ಅನಿಲ ಬಡಿಗೇರ, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಪಿಆರ್‌ಇಡಿ ಹಾಗೂ ಕಂದಾಯ ನಿರೀಕ್ಷಕರಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಗಿದೆ ಎಂದರು.

# ಮುಂಬೈಗೆ ಮಂಜಿನ ಹೊದಿಕೆ: ದೆಹಲಿಗಿಂತಲೂ ಹೆಚ್ಚಿನ ಪ್ರಮಾಣದ ಪಿಎಂ10 ಮಟ್ಟ

■ವಿಜಯಸಾಕ್ಷಿ ಸುದ್ದಿ, ಮುಂಬೈ

ಮುಂಬೈ ಮಂಜಿನ ಹೊದಿಕೆಯಿಂದ ಆವೃತಗೊಂಡಿದ್ದು, ವಾಯುಗುಣಮಟ್ಟ ಕುಸಿದಿದೆ. ಮಧ್ಯಮ ವಿಭಾಗದಲ್ಲಿ ಗಾಳಿಯ ಗುಣಮಟ್ಟ ದಾಖಲಾಗಿದ್ದು, ಈ ವಾತಾವರಣ ಕಳೆದ ಮೂರು ದಿನಗಳಿಂದ ಕಂಡುಬರುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಟಿಯಾರಾಲಜಿ -ಮ್ಯಾನೇಜ್ಡ್ ಸಿಸ್ಟಮ್ ಆಫ್ ಏರ್ ಕ್ವಾಲಿಟಿ ಮತ್ತು ಹವಾಮಾನ ಮುನ್ಸೂಚನೆ ಮತ್ತು ಸಂಶೋಧನೆಯ ಪ್ರಕಾರ ಬುಧವಾರ (ಅ.18) ಸಂಜೆ 6 ಗಂಟೆ ವೇಳೆಗೆ ಮುಂಬೈ ನ ಗಾಳಿಯ ಪಿಎಂ10 ಮಟ್ಟ 143 ಇದ್ದರೆ, ದೆಹಲಿಯಲ್ಲಿ 122 ದಾಖಲಾಗಿದೆ.

"ತೇವಾಂಶದ ಲಭ್ಯತೆ, ಆ್ಯಂಟಿ ಸೈಕ್ಲೋನಿಕ್ ವಿಂಡ್ ಪರಿಚಲನೆಯು ಗಾಳಿಯನ್ನು ಏರಲು ಬಿಡುವುದಿಲ್ಲ. ಆ್ಯಂಟಿ ಸೈಕ್ಲೋನ್ ಮುಂಬೈ ಮೇಲೆ ಇದೆ, ಇದರಿಂದಾಗಿ ತೇವಾಂಶವು ಗಾಳಿಯಲ್ಲಿ ಸಿಲುಕಿಕೊಳ್ಳುತ್ತದೆ ಎಂದು ಭಾರತದ ಹವಾಮಾನ ಇಲಾಖೆಯ ವಿಜ್ಞಾನಿ ಸುಷ್ಮಾ ನಾಯರ್ ಹೇಳಿದ್ದಾರೆ.

ಹದಗೆಡುತ್ತಿರುವ ಗಾಳಿಯ ಮಟ್ಟದಿಂದ ಉಸಿರಾಟದ ಕಾಯಿಲೆಗಳು ಬರುತ್ತವೆ ಎಂದು ವೈದ್ಯಕೀಯ ವೃತ್ತಿಪರರು ಹೇಳಿದ್ದಾರೆ.



ಶಿಗ್ಲಿಯ ಎಸ್.ಎಸ್ ಕೂಡ್ಲಮಠ ಮಾಧ್ಯಮಿಕ ಶಾಲೆ ವಿದ್ಯಾರ್ಥಿಗಳಾದ ಪ್ರವೀಣ ಲಮಾಣಿ ಮತ್ತು ಲಕ್ಷ್ಮೀ ಬಾಳಿಕಾಯಿ ಗದುಗಿನಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ, ಸರಪಳಿ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಹಾಗೂ ಭರಮಗೌಡ ಪಾಟೀಲ ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕ ವೃಂದ ಅಭಿನಂದಿಸಿದೆ.

# ಅಕ್ರಮ ಅಕ್ಕಿ ಸಂಗ್ರಹ ವಶಕ್ಕೆ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ 17ನೇ ವಾರ್ಡ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ತಲಾ ಸುಮಾರು 50 ಕೆಜಿ ತೂಕದ 80ಕ್ಕೂ ಹೆಚ್ಚು ಪಡಿತರ ಅಕ್ಕಿ ಚೀಲಗಳುನ್ನು ತಹಸೀಲ್ದಾರ್ ಧನಂಜಯ್ ಎಂ ನೇತೃತ್ವದಲ್ಲಿ ದಾಳಿ ನಡೆಸಿ ವಶಕ್ಕೆ ಪಡೆಯಲಾಗಿದೆ.

ವಶಕ್ಕೆ ಪಡೆದ ಅಕ್ಕಿಯ ಒಟ್ಟೂ ಮೌಲ್ಯ 1.30 ಲಕ್ಷ ರೂ. ಎಂದು ಅಂದಾಜಿಸಲಾಗಿದೆ. ಅಕ್ರಮವಾಗಿ ಪಡಿತರ ಅಕ್ಕಿ ಸಂಗ್ರಸಿಟ್ಟದ್ದ ಆರೋಪದಡಿ ಶಿವಾನಂದ ಕೊಟ್ಟೆಪ್ಪ ಬಡಿಗೇರ, ವೀರೇಶ ಕೊಟ್ಟೆಪ್ಪ ಬಡಿಗೇರ ವಿರುದ್ಧ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಂದಾಯ ಇಲಾಖೆಯ ಆಹಾರ ನಿರೀಕ್ಷಕರ ಜಗದೀಶ ಅಮಾತಿ ಹಾಗೂ ಪೊಲೀಸ್ ಸಿಬ್ಬಂದಿಗಳು ದಾಳಿಯಲ್ಲಿ ಪಾಲ್ಗೊಂಡಿದ್ದರು.

## ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಯುವ ಜನಾಂಗ ದೇಶದ ದೊಡ್ಡ ಶಕ್ತಿ

■ವಿಜಯಸಾಕ್ಷಿ ಸುದ್ದಿ, ಲಿಂಗಸುಗೂರು

ರಾಷ್ಟ್ರದ ಉಜ್ವಲ ಭವಿಷ್ಯವನ್ನು ನಿರ್ಮಾಣಗೊಳಿಸುವ ಶಕ್ತಿ ಯುವ ಜನಾಂಗದಲ್ಲಿದೆ. ಆಲಸ್ಯ ಮತ್ತು ದುರ್ವ್ಯಸನಗಳಿಂದ ದೂರವಾಗಿ ಸದೃಢ ಸಮಾಜವನ್ನು ಕಟ್ಟಿ ಬೆಳೆಸುವಲ್ಲಿ ಯುವ ಜನಾಂಗ ಗಟ್ಟಿ ಹೆಜ್ಜೆಯನ್ನಿಡುವ ಅಗತ್ಯವಿದೆ. ಆದ್ದರಿಂದ ಯುವ ಶಕ್ತಿ ದೇಶದ ಬಲು ದೊಡ್ಡ ಶಕ್ತಿ ಮತ್ತು ಆಸ್ತಿಯಾಗಿದ್ದಾರೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 3ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯನಿಗೆ ಹೆತ್ತ ತಾಯಿ ಹೊತ್ತ ನೆಲ ಎಷ್ಟು ಮುಖ್ಯವೋ ಅಷ್ಟೇ ಧರ್ಮವೂ ಮುಖ್ಯ ಎಂಬುದನ್ನು ಅರಿಯಬೇಕು. ಭೌತಿಕ ಬದುಕಿಗೆ ಆಧ್ಯಾತ್ಮದ ಅರಿವು ಆದರ್ಶಗಳು ಬೇಕು. ಆತ್ಮ ಸಂಯಮ ಆಧ್ಯಾತ್ಮದ ಅಡಿಪಾಯವಾಗಿದೆ. ಮಾನವತೆಯಿಂದ ದೈವತ್ವದ ಕಡೆಗೆ ಒಯ್ಯುವ ಮಾರ್ಗವೇ ಸಂಸ್ಕೃತಿ. ಬಾಳೆಗೆ ಗೊನೆ ಇರುವಂತೆ ಬದುಕಿಗೊಂದು ಗುರಿಯಿರಬೇಕು. ಧರ್ಮದಿಂದ ವಿಮುಖರಾದರೆ ಮಾನವನ ಜೀವನ ಅಶಾಂತಿಯ ಕಡಲಾಗುತ್ತದೆ. ಬದುಕಿನ ಅರಿವು ಮತ್ತು ರಹಸ್ಯ ಬೋಧಿಸುವುದೇ ನಿಜವಾದ ಧರ್ಮವಾಗಿದೆ ಎಂದು ನುಡಿದರು.



ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು. ಇದೇ ಸಂದರ್ಭದಲ್ಲಿ ಸಿಂಧನೂರಿನ ವೀರೇಶ ಪಾಟೀಲ ಅವರಿಗೆ 'ರಂಭಾಪುರಿ ಯುವಸಿರಿ' ಪ್ರಶಸ್ತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿ ಶುಭ ಹಾರೈಸಿದರು. ದೇವರಭೂಪುರ ಶ್ರೀಗಳು ಪ್ರಶಸ್ತಿ ವಾಚನ ಮಾಡಿದರು.

ಅಬ್ಬಿಗೇರಿ ಶ್ರೀ ವೀರಭದ್ರ ಶಿವಾಚಾರ್ಯರು, ರೋಣ ಶಾಸಕ ಜಿ.ಎಸ್ ಪಾಟೀಲ ಹಾಗೂ ಅಬ್ಬಿಗೆರೆ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀ ಜಗದ್ಗುರು ರಂಭಾಪುರಿ ಪೀಠದ 2024ನೇ ಸಾಲಿನ ಶರನ್ನವರಾತ್ರಿ ದಸರಾ ಧರ್ಮ ಸಮಾರಂಭ ರೋಣ ತಾಲೂಕ ಅಬ್ಬಿಗೆರೆಯಲ್ಲಿ ನೆರವೇರಿಸಲಾಗುವುದೆಂದು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರಕಟಪಡಿಸಿದರು. ಶಿರಕೋಳ ಹಿರೇಮಠದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ನುಡಿ ಸಲ್ಲಿಸಿದರು. ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು.

ಶಾಸಕ ಮಾನಪ್ಪ ಡಿ.ವಜ್ಜಲ ಉಪಸ್ಥಿತರಿದ್ದರು. ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ 'ಜಂಗಮವಾಹಿನಿ' ಪತ್ರಿಕೆ ಬಿಡುಗಡೆ ಮಾಡಿದರು. ದೇವರಭೂಪುರ ಬೃಹನ್ಮಠದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಎಡೆಯೂರು ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳನ್ನು ಮೊದಲ್ಗೊಂಡು ಬಸವಕಲ್ಯಾಣ, ಸಿಂಧನೂರು, ರೌಡಕುಂದ, ಮಸ್ಕಿ, ಮಳಲಿ, ಸಂಗೊಳ್ಳಿ, ಹಂಪಸಾಗರ ಶ್ರೀಗಳು ಸಮಾರಂಭದಲ್ಲಿ ಇದ್ದರು.

ರೋಣ ಕ್ಷೇತ್ರದ ಶಾಸಕ ಜಿಎಸ್ ಪಾಟೀಲ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ ಸಾಮಾಜಿಕ ವ್ಯವಸ್ಥೆಯಲ್ಲಿ ನೀತಿ ಸಂಹಿತೆ ಇಲ್ಲದ ಕಾರಣ ದಿಕ್ಕು ದಾರಿ ತಪ್ಪಿ ಮನುಷ್ಯ ನಡೆಯುತ್ತಿದ್ದಾನೆ. ಜಗದಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇವೆ. ಯಾವುದರಿಂದ ನಮ್ಮೆಲ್ಲರ ಬಾಳು ಬೆಳೆಯಲು ಸಾಧ್ಯವಿದೆಯೋ ಆ ದಾರಿಯಲ್ಲಿ ಮುನ್ನಡೆಯುವ ಜವಾಬ್ದಾರಿ ಅವರವರಿಗೆ ಬಿಟ್ಟದ್ದಾಗಿದೆ. ಇಂಥ ಸಮಾರಂಭಗಳು ನಡೆಯುತ್ತಿರುವುದರಿಂದ ಮನುಷ್ಯನಲ್ಲಿ ಒಂದು ಆತ್ಮ ವಿಶ್ವಾಸ ಮೂಡಿ ಸತ್ಪ್ರಜೆಗಳಾಗಲು ಸಾಧ್ಯವಿದೆ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka